# ಜನತಾ ವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಡಿಸೆಂಬರ್ 07, 2024

ಸಂಪುಟ : 51 ಸಂಚಿಕೆ : 204 ☎ 08192-254736 ✆ 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







# ಶೋಷಿತ, ದಮನಿತ ವರ್ಗಗಳಿಗೆ ಧ್ವನಿಯಾದವರು ಅಂಬೇಡ್ಕರ್



ದಾವಣಗೆರೆ ಅಂಬೇಡ್ಕರ್ ವೃತ್ತದಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ರವರ ಪುತ್ಥಳಿಗೆ ಜಿಲ್ಲಾಧಿಕಾರಿಗಳು ಮಾಲಾರ್ಪಣೆ ಮಾಡಿದರು. ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಈ ಸಂದರ್ಭದಲ್ಲಿದ್ದರು.

**ಡಾ.ಬಿ.ಆರ್.ಅಂಬೇಡ್ಕರ್ 68ನೇ ಮಹಾ ಪರಿನಿರ್ವಾಣ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಡಾ. ಗಂಗಾಧರಸ್ವಾಮಿ**

ದಾವಣಗೆರೆ, ಡಿ.6- ಜ್ಞಾನವಂತರು, ಸಮಾಜ ಸುಧಾರಕರು, ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ. ಆರ್.ಅಂಬೇಡ್ಕರ್ ರವರು ನಿರಂತರ ಅಧ್ಯಯನದಿಂದ ತಮ್ಮ ಜ್ಞಾನದ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡರು. ತಮ್ಮ ಜ್ಞಾನ, ಶಿಕ್ಷಣ ಅಸ್ತ್ರದಿಂದ ಶೋಷಿತ, ದಮನಿತ ವರ್ಗಗಳಿಗೆ ಧ್ವನಿಯಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲಾಡಳಿತ ಕಚೇರಿಯಲ್ಲಿ ಆಯೋಜಿಸಲಾದ ಡಾ; ಬಿ.ಆರ್. ಅಂಬೇಡ್ಕರ್ ರವರ 68 ನೇ ಮಹಾ ಪರಿನಿರ್ವಾಣ ದಿನಾಚರಣೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಬಾಬಾ ಸಾಹೇಬರ ಮೂಲಮಂತ್ರಗಳಾದ ಶಿಕ್ಷಣ, ಸಂಘಟನೆ, ಹೋರಾಟ ಎಂಬ ಧ್ಯೇಯ ವಾಕ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿರುವ ಶೋಷಿತರು, ತುಳಿತಕ್ಕೊಳಪಟ್ಟ ವರ್ಗಗಳಿಗೆ ನ್ಯಾಯ ಕೊಡಬೇಕಾಗಿದೆ ಎಂದರು.

ಪರಿನಿರ್ವಾಣ ಎಂಬುವುದು ಬೌದ್ಧಧರ್ಮದ ಮುಖ್ಯ ತತ್ವ ಹಾಗೂ ಗುರಿಗಳಲ್ಲಿ ಒಂದಾಗಿದೆ. ಸಂಸ್ಕೃತದಲ್ಲಿ ಪರಿನಿರ್ವಾಣಕ್ಕೆ ಸಾವಿನ ನಂತರ ನಿರ್ವಾಣ ಎಂದರ್ಥ. ಇದು ದೇಹವು ಸತ್ತ ನಂತರ ನಿರ್ವಾಣದ ಸಾಧನೆಯನ್ನು ಸೂಚಿಸುತ್ತದೆ. ಬೌದ್ಧಧರ್ಮದ ಪ್ರಕಾರ ನಮ್ಮ ಜೀವನದ ಕರ್ಮವನ್ನು ದೇಹದ ಮರಣದ ನಂತರ ಆತ್ಮದ ಮೂಲಕ ಮುಂದಿನ ಜನ್ಮಕ್ಕೆ ಸಾಗಿಸಲಾಗುತ್ತದೆ. ಅಂಬೇಡ್ಕರರು ಅಪಾರ ಜ್ಞಾನ ಹೊಂದಿದ್ದರಿಂದಲೇ ಅವರು ಪ್ರಪಂಚ ಗುರುತಿಸುವಂತಹ ವ್ಯಕ್ತಿಯಾಗಿದ್ದರು, ಅದರಿಂದಾಗಿ ಇಡೀ ಪ್ರಪಂಚ ಅವರನ್ನು ಗೌರವಿಸುತ್ತಿದೆ. ಇಂತಹ ಮಹಾನ್ ವ್ಯಕ್ತಿಗಳ ಆದರ್ಶಗಳನ್ನು ನಾವುಗಳು ಪ್ರತಿ ಹೆಜ್ಜೆಯಲ್ಲಿಯೂ ಪಾಲಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಹೆಗ್ಗೆರೆ ರಂಗಪ್ಪ ಮತ್ತು ನೀರ್ಥಡಿ ಸಂಗಡಿಗರಿಂದ ಅಂಬೇಡ್ಕರ್ ಕುರಿತು (5ನೇ ಪುಟಕ್ಕೆ)

# ಹಾಸನದ ಸಮಾವೇಶಕ್ಕೆ ಪ್ರತಿಯಾಗಿ ಮಂಡ್ಯದಲ್ಲಿ 15ಕ್ಕೆ ಜೆಡಿಎಸ್ ಸಮ್ಮೇಳನ

**ಹೆಚ್ಚಿಕೆಗೆ ಅಭಿನಂದಿಸುವ ನೆಪದಲ್ಲಿ ಸಿದ್ಧರಾಮಯ್ಯಗೆ ಉತ್ತರ ನೀಡಲು ಸಮಾವೇಶ**

**ಹೆಚ್.ಡಿ. ದೇವೇಗೌಡರ ದೆಹಲಿ ನಿವಾಸದಲ್ಲಿ ಅವರ ಸಮ್ಮುಖದಲ್ಲೇ ಈ ನಿರ್ಣಯ**

ಬೆಂಗಳೂರು, ಡಿ. 6- ಹಾಸನದ ಜನಕಲ್ಯಾಣ ಸಮಾವೇಶಕ್ಕೆ ಪ್ರತಿಯಾಗಿ ಡಿಸೆಂಬರ್ 15ರಂದು ಮಂಡ್ಯದಲ್ಲಿ ಜೆಡಿಎಸ್ ಬೃಹತ್ ಸಮ್ಮೇಳನ ಆಯೋಜಿಸಿದೆ.

ಹಾಸನದ ಸಮಾವೇಶ ಮುಗಿಯುತ್ತಿದ್ದಂತೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ದೆಹಲಿ ನಿವಾಸದಲ್ಲಿ ಅವರ ಸಮ್ಮುಖದಲ್ಲೇ ಈ ನಿರ್ಣಯ ಕೈಗೊಳ್ಳಲಾಗಿದೆ.

ದೇವೇಗೌಡರಲ್ಲದೆ, ಕೇಂದ್ರ ಸಚಿವ ಎಚ್. ಡಿ.ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ.ರೇವಣ್ಣ, ಮಾಜಿ ಶಾಸಕರಾದ ಸಾ.ರಾ. ಮಹೇಶ್ ಹಾಗೂ ಸಿ.ಎಸ್ ಪುಟ್ಟರಾಜು ಉಪಸ್ಥಿತರಿದ್ದರು.

ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಅಭಿನಂದನೆ ಸಲ್ಲಿಸುವ ನೆಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಉತ್ತರ ನೀಡಲು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಮೈಸೂರು, ರಾಮನಗರ, ಹಾಸನ, ಚಾಮರಾಜನಗರ ಹಾಗೂ ಸ್ಥಳೀಯ ಮಂಡ್ಯದ ಒಂದು ಲಕ್ಷ ಕಾರ್ಯಕರ್ತರನ್ನು ಅಲ್ಲಿನ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಸೇರಿಸಿ, ಹಾಸನದಲ್ಲಿ ಸಿದ್ದರಾಮಯ್ಯ ಎತ್ತಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಲಿದ್ದಾರಂತೆ.

ಡಿಸೆಂಬರ್ 16 ಕುಮಾರಸ್ವಾಮಿ ಅವರ ಜನ್ಮದಿನವಾಗಿದ್ದು ಅದರ ಹಿಂದಿನ ದಿನ, ಅವರು ಕೇಂದ್ರ ಸಚಿವರಾಗಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಈ ಸಮಾವೇಶ ನಡೆಯುತ್ತಿದೆ.

ಸಿ.ಎಸ್.ಪುಟ್ಟರಾಜು ಹಾಗೂ ಸಾ.ರಾ.ಮಹೇಶ್ ಅಭಿನಂದನಾ ಸಮಾರಂಭದ ಪೂರ್ಣ ಹೊಣೆಗಾರಿಕೆ ವಹಿಸಿಕೊಳ್ಳಲಿದ್ದಾರೆ.

ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಿನ ಗಡಿ ಜಿಲ್ಲೆಯಲ್ಲೇ ದೊಡ್ಡ ಪ್ರಮಾಣದಲ್ಲಿ ಕಾರ್ಯಕರ್ತರನ್ನು ಸೇರಿಸಿ ಅವರಿಗೆ ಟಾಂಗ್ ಕೊಡುವುದು ಹಾಗೂ ಅವರ ಮೇಲಿನ ಭ್ರಷ್ಟಾಚಾರ ಆರೋಪ (2ನೇ ಪುಟಕ್ಕೆ)

# ವಿದ್ಯಾರ್ಥಿಗಳ ಕೊರತೆ ಇದ್ದರೂ ಅನುದಾನ

## ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಮಾನ್ಯತೆ ನಿಯಮಗಳ ತಿದ್ದುಪಡಿಗೆ ಸಂಪುಟ ಅಸ್ತು

**ಇದುವರೆಗೂ ಪ್ರಾಥಮಿಕ ಶಾಲೆಯಲ್ಲಿ ಶೇಕಡ 25ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇಕಡ 50ರಷ್ಟು ವಿದ್ಯಾರ್ಥಿಗಳ ಸಂಖ್ಯೆ ಇದ್ದರೆ ಮಾತ್ರ ಸವಲತ್ತು ನೀಡಲು ಕಾನೂನಿನಲ್ಲಿ ಅವಕಾಶವಿತ್ತು.**

ಬೆಂಗಳೂರು, ಡಿ. 6- ವಕ್ಫ್ ಬೋರ್ಡ್ ಆಸ್ತಿ ವಿವಾದದ ಬೆನ್ನಲ್ಲೇ ರಾಜ್ಯ ಸರ್ಕಾರ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಮಾನ್ಯತೆಗೆ ಸಂಬಂಧಿಸಿದಂತೆ ನಿಯಮಗಳಿಗೆ ತಿದ್ದುಪಡಿ ತರಲು ಇಂದಿಲ್ಲಿ ಸೇರಿದ್ದ ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಲ್ಲದಿದ್ದರೂ, ಅವುಗಳ ಅನುದಾನ ಮುಂದುವರೆಸುವ ಉದ್ದೇಶ ಈ ತಿದ್ದುಪಡಿಯದ್ದಾಗಿದೆ.

ಬೆಳಗಾವಿಯಲ್ಲಿ ನಡೆಯಲಿರುವ ಅಧಿವೇಶನದಲ್ಲಿ ತಿದ್ದುಪಡಿ ಮಂಡಿಸಿ ಅನುಮೋದನೆ ಪಡೆಯಲು ಸಂಪುಟ ನಿರ್ಧರಿಸಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ್, ಈ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇದ್ದರೂ, ಅವುಗಳನ್ನು ಮುಂದುವರೆಸುವುದು ಮತ್ತು ಅನುದಾನ ನೀಡುವುದು ಸೇರಿದೆ ಎಂದರು.

ಇದುವರೆಗೂ ಪ್ರಾಥಮಿಕ ಶಾಲೆಯಲ್ಲಿ ಶೇಕಡ 25ರಷ್ಟು ಹಾಗೂ ಪ್ರೌಢಶಾಲೆಗಳಲ್ಲಿ ಶೇಕಡ 50ರಷ್ಟು ವಿದ್ಯಾರ್ಥಿಗಳ ಸಂಖ್ಯೆ ಇದ್ದರೆ ಮಾತ್ರ ಸವಲತ್ತು ನೀಡಲು ಕಾನೂನಿನ ಅವಕಾಶವಿತ್ತು.

ದಿನದಿಂದ ದಿನಕ್ಕೆ ಈ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಅನುದಾನ ಪಡೆಯಲು ತೊಂದರೆಯಾಗಿತ್ತು. ಇದನ್ನು ತಪ್ಪಿಸಿ, ಶಿಕ್ಷಣ ಭವಿಷ್ಯ ನೀಡುವ ಉದ್ದೇಶದಿಂದ ಸರ್ಕಾರ ಈ ಮಹತ್ವದ ತೀರ್ಮಾನ ಕೈಗೊಂಡಿದೆ.

ಹಜ್ ಮತ್ತು ಅಲ್ಪಸಂಖ್ಯಾತ ಇಲಾಖೆಯಡಿ ಬರುವ ಶೈಕ್ಷಣಿಕ ಸಂಸ್ಥೆಗಳನ್ನೂ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸಿ ಅವುಗಳಿಗೂ ಸೌಕರ್ಯ ನೀಡಲು ನಿಯಮಗಳಲ್ಲಿ ತಿದ್ದುಪಡಿ ತರಲಾಗುತ್ತಿದೆ. ಸರ್ಕಾರದ ಸಂಪನ್ಮೂಲ ವೃದ್ಧಿಸುವ ಉದ್ದೇಶದಿಂದ ಇನ್ನು ಮುಂದೆ ಕಲ್ಲು ಗಣಿಗಾರಿಕೆಗೆ ಪ್ರತಿ ಮೆಟ್ರಿಕ್ ಟನ್‌ಗೆ 10 ರೂ. ದರ ಹೆಚ್ಚಳಕ್ಕೆ ಸಂಪುಟ ಸಮ್ಮತಿಸಿದೆ.

ಇದರಿಂದ ಬೊಕ್ಕಸಕ್ಕೆ 311 ಕೋಟಿ ರೂ. ಹೆಚ್ಚುವರಿ ರಾಜಸ್ವ ಸಂಗ್ರಹವಾಗಲಿದೆ, ಪ್ರಸ್ತುತ ಪ್ರತಿ ಮೆಟ್ರಿಕ್ ಟನ್‌ಗೆ 70 ರೂ. ಇದ್ದು, ಈ ಮೊತ್ತ 80 ರೂ.ಗೆ ಹೆಚ್ಚಳವಾಗಲಿದೆ.

ಈ ಕಾರಣಕ್ಕಾಗಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳಿಗೆ ತಿದ್ದುಪಡಿಗೆ ಅನುಮೋದನೆ ನೀಡಲಾಗಿದೆ ಎಂದರು.

ವಿಶ್ವ ಬ್ಯಾಂಕ್‌ನಿಂದ 2,500 ಕೋಟಿ ರೂ. ನೆರವು ಪಡೆದು ರಾಜ್ಯ ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳ ಬಲವರ್ಧನೆ ಯೋಜನೆಗಳಿಗೆ ವಿಶ್ವ ಬ್ಯಾಂಕ್‌ನಿಂದ 1,750 ಕೋಟಿ ರೂ. ಹಾಗೂ ತನ್ನ ಪಾಲಿನ 750 ಕೋಟಿ ರೂ. ಬಳಸಲಿದ್ದು, ಈ ಮೂಲಕ ಸರ್ಕಾರಿ ಪದವಿ, ಇಂಜಿನಿಯರಿಂಗ್ ಸೇರಿದಂತೆ, ಇತರೆ ಶಿಕ್ಷಣ ಸಂಸ್ಥೆಗಳಿಗೆ ಸಂಶೋಧನೆ ಮತ್ತು ಹೊಸ ವಿಷಯಗಳ ಅಳವಡಿಕೆಗೆ ಈ ಹಣ ಬಳಕೆ ಮಾಡಿಕೊಳ್ಳಲು ನಿರ್ಧರಿಸಿದೆ. ಸಮಾಜ (4ನೇ ಪುಟಕ್ಕೆ)

# ಸದನದಲ್ಲಿ ಸಂಸದನಿಗೆ ಮೀಸಲಾಗಿದ್ದ ಆಸನದಲ್ಲಿ ಕಂತೆ ಕಂತೆ ನೋಟು

ನವದೆಹಲಿ, ಡಿ.6- ಕಾಂಗ್ರೆಸ್ ಸಂಸದ ಅಭಿಷೇಕ್ ಮನು ಸಿಂಘ್ವಿ ಅವರಿಗೆ ಮೀಸಲಾಗಿದ್ದ ಆಸನದಲ್ಲಿ ಕಂತೆ ಕಂತೆ ನೋಟು ಪತ್ತೆಯಾಗಿವೆ. ಈ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಶುಕ್ರವಾರ ತಿಳಿಸಿದ್ದಾರೆ.

ಗುರುವಾರ ಸದನವನ್ನು ಮುಂದೂಡಿದ ಬಳಿಕ ಪರಿಶೀಲನೆ ವೇಳೆ ಆಸನ ಸಂಖ್ಯೆ 222ರಲ್ಲಿ ಭದ್ರತಾ ಸಿಬ್ಬಂದಿ ಕಂತೆ ಕಂತೆ ನೋಟುಗಳನ್ನು ವಶಪಡಿಸಿಕೊಂಡಿದ್ದಾರೆ. ಸದನದ ಶಿಷ್ಟಾಚಾರದಂತೆ ತನಿಖೆಗೆ ಆದೇಶಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಈ ಕುರಿತು ಸದನಕ್ಕೆ ತಿಳಿಸುವುದು ನನ್ನ (5ನೇ ಪುಟಕ್ಕೆ)

# ಕೃಷ್ಣನ ದೇವಾಲಯದಲ್ಲಿ ಬೆಳ್ಳಿ ಪಿಸ್ತೂಲ್, 1 ಕೆಜಿ ಚಿನ್ನ, 23 ಕೋಟಿ ರೂ.ನಗದು

ಜೈಪುರ, ಡಿ.6- ರಾಜಸ್ಥಾನದ ಚಿತ್ತೂರ್ಗಢದಲ್ಲಿರುವ ಸನ್ವಾಲಿಯಾ ಸೇಠ್ (ಶ್ರೀಕೃಷ್ಣ) ದೇವಾಲಯಕ್ಕೆ 1 ಕೆ.ಜಿ ಚಿನ್ನ, 23 ಕೋಟಿ ನಗದು, ಬೆಳ್ಳಿಯ ಪಿಸ್ತೂಲ್ ಸೇರಿದಂತೆ ಅಪಾರ ಪ್ರಮಾಣದ ಕಾಣಿಕೆ ಹರಿದು ಬಂದಿದೆ.

ಸನ್ವಾಲಿಯಾ ಸೇಠ್ ದೇವಾಲಯದಲ್ಲಿ ಶ್ರೀಕೃಷ್ಣನನ್ನು ಪೂಜಿಸಲಾಗುತ್ತದೆ. ಈ ದೇವಸ್ಥಾನಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ.

ಇತ್ತೀಚೆಗೆ ದೇವಾಲಯದ ಹುಂಡಿಯಲ್ಲಿರುವ ಚಿನ್ನ, ಬೆಳ್ಳಿ ಹಾಗೂ ನಗದು ಹಣವನ್ನು ಎಣಿಕೆ ಮಾಡಲಾಯಿತು ಎಂದು (4ನೇ ಪುಟಕ್ಕೆ)

# ಅಶ್ರುವಾಯು ಸಿಡಿತದಿಂದ ರೈತನಿಗೆ ಗಾಯ : ದೆಹಲಿ ಪಾದಯಾತ್ರೆ ಸ್ಥಗಿತ

ಶಂಭು, ಡಿ.6- ಭದ್ರತಾ ಸಿಬ್ಬಂದಿ ಅಶ್ರುವಾಯು ಶೆಲ್ ಸಿಡಿಸಿದ್ದರಿಂದ ಕೆಲವು ರೈತರು ಗಾಯಗೊಂಡ ಹಿನ್ನೆಲೆಯಲ್ಲಿ ದೆಹಲಿ ಚಲೋ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಹರಿಯಾಣದ ಭದ್ರತಾ ಸಿಬ್ಬಂದಿ ಅಶ್ರುವಾಯು ಶೆಲ್ ಸಿಡಿಸಿದ್ದರಿಂದ ಪ್ರತಿಭಟನಾ ನಿರತ ಐದರಿಂದ ಆರು ರೈತರು ಗಾಯಗೊಂಡಿದ್ದಾರೆ ಎಂದು ರೈತ ಮುಖಂಡ ಸರವಣ ಸಿಂಗ್ ಪಂಧೇರ್ ಹೇಳಿದ್ದಾರೆ.

ರೈತ ಸಂಘಟನೆಗಳಾದ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ (2ನೇ ಪುಟಕ್ಕೆ)



# ಅಂಬೇಡ್ಕರ್ ಚಿಂತನೆ, ವಿಚಾರಧಾರೆ, ಜೀವನ ಚರಿತ್ರೆ ಅಧ್ಯಯನ ಅತ್ಯಗತ್ಯ

**ಡಾ. ಬಿ.ಆರ್. ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಹಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ**

ದಾವಣಗೆರೆ, ಡಿ. 6- ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಚಿಂತನೆಗಳು, ವಿಚಾರಧಾರೆಗಳು, ಜೀವನ ಚರಿತ್ರೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿದಾಗ ಮಾತ್ರ ಪ್ರತಿಯೊಬ್ಬರಿಗೂ ಅಂಬೇಡ್ಕರ್ ಅರ್ಥವಾಗಲು ಸಾಧ್ಯ ಎಂದು ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ನಗರದ ಗಾಂಧಿನಗರದಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ಮಾನವ ಬಂಧುತ್ವ ವೇದಿಕೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಶರಣ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ. ಬಿ. ಆರ್. ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಹಣಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸನಾತನ ವ್ಯವಸ್ಥೆಯಲ್ಲಿ ಶ್ರೇಷ್ಠ-ಕನಿಷ್ಠ ಎಂಬುದನ್ನು ಸಮಾಜದಲ್ಲಿ ಬಿತ್ತಿದ್ದು, ಹುಟ್ಟಿನಿಂದ ಯಾವುದೂ ಶ್ರೇಷ್ಠ, ಕನಿಷ್ಠ ಅಲ್ಲ. ಮೌಢ್ಯಾಚರಣೆಗಳನ್ನು ತಡೆಯುವ ಸಲುವಾಗಿ ಸ್ಮಶಾನದಲ್ಲಿ ಇಂತಹ ಕಾರ್ಯಕ್ರಮಗಳನ್ನು ಇಡೀ ರಾಜ್ಯಾದ್ಯಂತ ಮಾನವ ಬಂಧುತ್ವ ವೇದಿಕೆ ಅಡಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಸಂವಿಧಾನ ಮುಖೇನ ನಾವೆಲ್ಲರೂ ಸಮಾನರು ಎಂದು ಸಾರಿದವರು ಅಂಬೇಡ್ಕರ್. ಈ ಕಾರಣಕ್ಕಾಗಿ ಸನಾತನಿಗಳಿಗೆ ಅಂಬೇಡ್ಕರ್ ಮತ್ತು ಸಂವಿಧಾನ ಬೇಡವಾಗಿದೆ ಎಂದು ಹೇಳಿದರು.

ನಮ್ಮನ್ನು ಗೌರವಿಸುವ ಸಂವಿಧಾನ ಬೇಕೆನ್ನುವವರ ಮನಸ್ಥಿತಿ ಬದಲಾಗಬೇಕಾಗಿದೆ. ದೇಶ ಒಡೆಯುವ ಕೆಲಸವನ್ನು ಕೆಲವರು ಮಾಡುತ್ತಿದ್ದು, ಸಂವಿಧಾನ ಸಮತೆಯ ಹಾಸು ಆಗಿರುವ ಕಾರಣಕ್ಕಾಗಿ ಸನಾತನಿಗಳು, ಕೋಮುವಾದಿಗಳು, ಧರ್ಮಾಂಧರು ಸಂವಿಧಾನದ ಮೇಲೆ, ಅಂಬೇಡ್ಕರ್ ವಿಚಾರಗಳು, ವಿಚಾರವಾದಿಗಳ ಹಲ್ಲೆ ಮಾಡುತ್ತಿದ್ದು, ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಮೇಲೆ ದಾಳಿ ಮಾಡಲಾಗುತ್ತಿದೆ (4ನೇ ಪುಟಕ್ಕೆ)

# ರೆಪೋ ದರ ಯಥಾಸ್ಥಿತಿ: ಸಾಲಗಾರರಿಗೆ ನಿರಾಸೆ



ನವದೆಹಲಿ, ಡಿ. 6-ಮತ್ತೊಮ್ಮೆ ರೆಪೋ ಮತ್ತು ರಿವರ್ಸ್ ರೆಪೋ ದರಗಳಲ್ಲಿ ಯಾವುದೇ ಬದಲಾವಣೆ ಮಾಡದೇ ಇರಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತೀರ್ಮಾನ ಮಾಡಿದೆ. ಈ ಮೂಲಕ ಬಡ್ಡಿ ದರ ಇಳಿದು, ಸಾಲದ ಇಎಂಐ ಇಳಿಕೆಯಾಗಲಿದೆ ಎಂಬ ನಿರೀಕ್ಷೆಯಲ್ಲಿದ್ದ ಸಾಲಗಾರರಿಗೆ ಮತ್ತೊಮ್ಮೆ ನಿರಾಸೆಯಾಗಿದೆ.

ಶುಕ್ರವಾರ ಮುಕ್ತಾಯಗೊಂಡ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯ ನಿರ್ಣಯಗಳನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ ಆರ್‌ಬಿಐ (2ನೇ ಪುಟಕ್ಕೆ)

# ತಡವಾಗಿ ಬಂದಿದ್ದನ್ನು ಪ್ರಶ್ನಿಸಿದ್ದಕ್ಕೆ ಪ್ರಾಂಶುಪಾಲರನ್ನೇ ಗುಂಡಿಕ್ಕಿ ಕೊಂದ 12ನೇ ತರಗತಿ ವಿದ್ಯಾರ್ಥಿ

ಛತ್ತರ್‌ಪುರ, ಡಿ.6 - ತಡವಾಗಿ ಬಂದಿದ್ದನ್ನು ಪ್ರಶ್ನಿಸಿದ್ದಕ್ಕೆ 12ನೇ ತರಗತಿ ವಿದ್ಯಾರ್ಥಿಯೊಬ್ಬ ತನ್ನ ಶಾಲೆಯ ಪ್ರಾಂಶುಪಾಲರನ್ನು ಗುಂಡಿಕ್ಕಿ ಕೊಂದಿರುವ ಘಟನೆ ಮಧ್ಯಪ್ರದೇಶದ ಛತ್ತರ್‌ಪುರ ಜಿಲ್ಲೆಯಲ್ಲಿ ಶುಕ್ರವಾರ ಮಧ್ಯಾಹ್ನ 1.30ರ ಸುಮಾರಿಗೆ ನಡೆದಿದೆ.

ಘಟನೆಯ ನಂತರ 17 ವರ್ಷದ ಬಾಲಕ ಪ್ರಾಂಶುಪಾಲರ ಸ್ಕೂಟರ್‌ನಲ್ಲಿ ಪರಾರಿಯಾಗಿದ್ದಾನೆ. ಆದರೆ ಕೆಲವೇ ಗಂಟೆ ಗಳಲ್ಲಿ ಬಂಧಿಸಲಾಯಿತು ಎಂದು ಓರ್ಚಾ ರಸ್ತೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪುಷ್ಪೇಂದ್ರ ಯಾದವ್ ತಿಳಿಸಿದ್ದಾರೆ.

ಉತ್ತರ ಪ್ರದೇಶ ಜಿಲ್ಲೆಯ ಗಡಿಯ ಬಳಿ ಆತನನ್ನು ಪತ್ತೆ ಹಚ್ಚಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಆರೋಪಿಯು ಶಾಲೆಯಲ್ಲಿ ದಾರಿ ತಪ್ಪಿದ ವರ್ತನೆಗಳಿಗೆ ಹೆಸರುವಾಸಿಯಾಗಿದ್ದಾನೆ. ಆತನಿಂದ ಹತ್ಯೆಗೆ ಬಳಸಿದ ಆಯುಧವನ್ನೂ ವಶಪಡಿಸಿಕೊಳ್ಳಲಾಗಿದೆ ಎಂದು ಯಾದವ್ ತಿಳಿಸಿದ್ದಾರೆ. (2ನೇ ಪುಟಕ್ಕೆ)


॥ ಶ್ರೀ ಕಲ್ಲೇಶ್ವರ ಪ್ರಸನ್ನ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತಾ॥ ಸುಲ್ತಾನಿಪುರ ಗ್ರಾಮದ ವಾಸಿ
ದಿ॥ ಶ್ರೀ ಪಟೇಲ್ ನಂಜಪ್ಪನವರ ಮಗನಾದ
ಶ್ರೀ ಎಸ್.ಜಿ. ದೇವೇಂದ್ರಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 29.11.2024ನೇ ಶುಕ್ರವಾರ ಮಧ್ಯಾಹ್ನ 2.20ಕ್ಕೆ ನನ್ನ ಸಹೋದರನಾದ

**ಶ್ರೀ ಜಿ.ಎನ್. ಕುಬೇರಪ್ಪನವರು**
ದಿ॥ ಶ್ರೀ ಪಟೇಲ್ ನಂಜಪ್ಪನವರ ದ್ವಿತೀಯ ಪುತ್ರ

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 07.12.2024ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ತಾ॥ ಸುಲ್ತಾನಿಪುರ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಮೃತರ ಪತ್ನಿ: ಶ್ರೀಮತಿ ಜಿ.ಎನ್. ರತ್ನಮ್ಮ,
ಶ್ರೀಮತಿ ಲತಾ, ಶ್ರೀ ಆರ್. ಬಸವರಾಜಪ್ಪ ಮತ್ತು ಮಕ್ಕಳು,
ಶ್ರೀಮತಿ ಪವಿತ್ರ, ಶ್ರೀ ಜಿ.ಕೆ. ರಾಘವೇಂದ್ರ ಮತ್ತು ಮಕ್ಕಳು
ಶ್ರೀಮತಿ ವೀಣಾ ಶ್ರೀ ಜಿ.ಕೆ. ನಟರಾಜ ಮತ್ತು ಮಕ್ಕಳು ಸುಲ್ತಾನಿಪುರ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಫೋ. : 9916525669, 9448834797

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಶೋಷಿತರು, ಬಡವರು ಮೌಢ್ಯ ವಿರೋಧಿಸಲು ಎ.ಬಿ. ರಾಮಚಂದ್ರಪ್ಪ ಕರೆ



ಹರಿಹರ, ಡಿ.6- ಶೋಷಿತ ಸಮುದಾಯ ಮತ್ತು ಬಡವರು ಒಂದುಗೂಡಿ ಮೌಢ್ಯ ವಿರೋಧಿಸಿದಾಗ, ಮೌಢ್ಯದಿಂದ ಮತ್ತು ದೌರ್ಜನ್ಯದಿಂದ ಮುಕ್ತವಾಗಲಿಕ್ಕೆ ಸಾಧ್ಯವಾಗುತ್ತದೆ ಎಂದು ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಪ್ರೊ. ಎ.ಬಿ. ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ನಗರದ ಕೈಲಾಸ ನಗರದ ಹಿಂದೂ ರುದ್ರಭೂಮಿ ಆವರಣದಲ್ಲಿ ಮಾನವ ಬಂಧುತ್ವ ವೇದಿಕೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಡಾ ಬಿ.ಆರ್. ಅಂಬೇಡ್ಕರ್ ರವರ 68 ನೇ ಮಹಾಪರಿನಿಬಾಣ ದಿನ ಆಚರಣೆ ಪ್ರಯುಕ್ತ ನಡೆದ ಮೌಢ್ಯ ವಿರೋಧಿ ಪರಿವರ್ತನಾ ಆಚರಣೆ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದ ಜನತೆ ನಾನು ಶ್ರೇಷ್ಠ ಮತ್ತು ನಾನು ಕನಿಷ್ಠ ಎಂಬ ಭಾವನೆಯಿಂದ ಹೊರಗಡೆ ಬಂದು ಮೌಢ್ಯ ಧಿಕ್ಕರಿಸಿ ನಡೆದಾಗ ತಮ್ಮ ಬದಕನ್ನು ಸುಂದರವಾಗಿ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಶೋಷಿತ ವರ್ಗದವರಿಗೆ ಅರಿವು, ಅಕ್ಷರ, ಅನ್ನ, ವಿವೇಕ ಸಿಗುವುದಕ್ಕೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ದೂರ ದೃಷ್ಟಿಯ ಚಿಂತನೆಗಳೇ ಕಾರಣವಾಗಿದೆ. ದಲಿತ ಹೆಣ್ಣು ಮಕ್ಕಳ ಮೇಲೆ ವ್ಯಭಿಚಾರ ಹೆಚ್ಚು ಆಗಲಿಕ್ಕೆ ವೈದಿಕ ಸನಾತನ ಧರ್ಮ ಕಾರಣವಾಗಿದೆ ಎಂದು ಅವರು ಹೇಳಿದರು.

ಜಗತ್ತಿನಲ್ಲಿ ಎಲ್ಲಾ ಸಮುದಾಯದ ಜನರು ಸಮಾನವಾಗಿ ಕಂಡಂತ ಏಕೈಕ ಸಂವಿಧಾನ, ಭಾರತದ ಸಂವಿಧಾನವಾಗಿದೆ. ಹುಟ್ಟಿನಿಂದ, ಬಣ್ಣ, ಭಾಷೆಯಿಂದ ಯಾರು ಶ್ರೇಷ್ಠರಲ್ಲ ಮತ್ತು ಯಾರು ಕನಿಷ್ಠರಲ್ಲ ಎಲ್ಲರೂ ಸಮಾನರು ಎಂಬ ಸಿದ್ದಾಂತ ಹೇಳಿದ ಕಾರಣಕ್ಕಾಗಿ ಭಾರತದಲ್ಲಿ ಒಕ್ಕೂಟ ವ್ಯವಸ್ಥೆ ಜೀವಂತವಾಗಿ ಉಳಿದಿದೆ. ಭಾರತದ ಸ್ವಾತಂತ್ರ ಪೂರ್ವದಲ್ಲಿ ಹಿಂದೂ ರಾಷ್ಟ್ರವಾಗಿತ್ತು ಎಂದು ಸುಳ್ಳು ಬಿತ್ತುವ ಕೆಲಸವಾಗಿತ್ತು. ಇದರಿಂದಾಗಿ ಹಿಂದೆ, ಹಿಂದೂ ರಾಷ್ಟ್ರ ಮಾಡುವ ಹೋರಾಟದ ಕಾರಣಕ್ಕಾಗಿ ನಾವು ಭಾರತದ ಒಂದು ಭಾಗವನ್ನು ಕಳೆದುಕೊಳ್ಳುವಂತಾಗಿ ಪಾಕಿಸ್ತಾನ ವಿಭಜನೆ ಹೊಂದಿದೆ ಎಂದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಇಲ್ಲಿನ ರುದ್ರಭೂಮಿ 2 ಎಕರೆ ವಿಸ್ತೀರ್ಣವನ್ನು ಹೊಂದಿರುವುದರಿಂದ ಬಹಳಷ್ಟು ಚಿಕ್ಕದಾಗಿ ಇದ್ದು, 5 ಎಕರೆ 24 ಗುಂಟೆ ಜಮೀನಿನಲ್ಲಿ ಹಿಂದೂ ರುದ್ರಭೂಮಿ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಶೀಘ್ರದಲ್ಲೇ ಹೊಸದಾಗಿ ಹಿಂಧೂ ರುದ್ರಭೂಮಿ ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಮಾತನಾಡಿ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಾಧನೆಯನ್ನು ಮುಂದೆ ಇಟ್ಕೊಂಡು, ನಾವು ಸಮಾಜದಲ್ಲಿ ಉತ್ತಮ ಕೆಲಸವನ್ನು ಮಾಡಿದಾಗ ಅಂಬೇಡ್ಕರ್ ರವರೆಗೆ ಸಲ್ಲಿಸುವ ಗೌರವ ಆಗುತ್ತದೆ ಎಂದು ಹೇಳಿದರು.

ಹೆಗ್ಗೆರೆ ರಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಕೋಮುವಾದಿ ಶಕ್ತಿಗಳು ಮೌಢ್ಯವನ್ನು ಬಲಪಡಿಸಲು ಮುಂದಾಗಿದ್ದು, ಅವುಗಳನ್ನು ವಿರೋಧಿಸುವಂತ ಕೆಲಸವನ್ನು ದಲಿತ ಸಂಘರ್ಷ ಸಮಿತಿ ಮಾಡಲಿಕ್ಕೆ ಮುಂದಾಗಿದೆ ಎಂದರು.

ಅಂಜುಮಾನ್ ಇಸ್ಲಾಮಿಯಾ ಸಮಿತಿ ಅಧ್ಯಕ್ಷ ಏಜಾಜ್ ಆಹ್ಮದ್ ಮಾತನಾಡಿ, ಅಂಬೇಡ್ಕರ್ ಅವರ ಕೊಡುಗೆ ಒಂದು ಸಮಾಜಕ್ಕೆ ಸೀಮಿತವಾಗದೆ ಎಲ್ಲಾ ವರ್ಗದವರಿಗೆ ಅಪಾರವಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಮುಖಂಡ ಎಂ.ಬಿ. ಅಣ್ಣಪ್ಪ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವೈಚಾರಿಕತೆ ಪದದ ಅರ್ಥವನ್ನು ಕಳೆದುಕೊಂಡ ಸ್ಥಿತಿಯನ್ನು ಕಾಣುತ್ತಿದ್ದೇವೆ. ಇದರಿಂದಾಗಿ ದಲಿತ ಯುವಕರು ವೈಜ್ಞಾನಿಕ ತಳಹದಿಯಲ್ಲಿ ಜ್ಞಾನ ಬೆಳೆಸಿಕೊಳ್ಳವಂತಾಗಬೇಕು ಎಂದರು.

ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎ.ಕೆ. ಭೂಮೇಶ್ ಮಾತನಾಡಿ, ಶೋಷಿತ ವರ್ಗದವರು ರಾಜಕೀಯ ಅಧಿಕಾರ ಪ್ರಾತಿನಿಧ್ಯವನ್ನು ಎಲ್ಲಾ ಕಡೆಗಳಲ್ಲಿ ಪಡೆದಾಗ ಮಾತ್ರ ದಲಿತರಿಗೆ ನ್ಯಾಯ ಸಿಕ್ಕಂತಾಗುತ್ತದೆ ಎಂದು ಹೇಳಿದರು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್ ಅವರು, ಇಂತಹ ಸಮಾರಂಭವನ್ನು ರುದ್ರಭೂಮಿಯಲ್ಲಿ ಮಾಡುವುದರಿಂದ ರುದ್ರಭೂಮಿ ಸ್ವಚ್ಛತೆ ಮತ್ತು ಇಲ್ಲಿ ಕಾರ್ಯಕ್ರಮ ಮಾಡಬಹುದು ಎಂದು ಜನರಿಗೆ ಅರಿವು ಮೂಡಿಸಿದಂತೆ ಆಗುತ್ತದೆ ಮತ್ತು ರುದ್ರಭೂಮಿಯಲ್ಲಿ ಯಾವುದೇ ದೇವರ ದೇವಸ್ಥಾನ ನಿರ್ಮಾಣಕ್ಕೆ ರಾಜಕೀಯ ಮುಖಂಡರು ಮತ್ತು ಸಮುದಾಯದ ಮುಖಂಡರು ಮುಂದಾಗುವಂತೆ ಹೇಳಿದರು.

ಈ ಸಂದರ್ಭದಲ್ಲಿ ಡಿ.ಎಸ್.ಎಸ್ ಸಂಘದ ಮುಖಂಡ ಮಂಜುನಾಥ್ ರಾಜನಹಳ್ಳಿ, ಡಿ.ಎಸ್.ಎಸ್. ಸಂಘದ ಜಿಲ್ಲಾ ಅಧ್ಯಕ್ಷ ಕೊಪ್ಪಳ ಮಂಜುನಾಥ್, ಕಾರ್ಯದರ್ಶಿ ಸಂತೋಷ ನೋಟದರ್, ತಾಲ್ಲೂಕು ಅಧ್ಯಕ್ಷ ಮಂಜುನಾಥ್, ಪಾರ್ವತಮ್ಮ, ಕೃಷ್ಣ, ಧನರಾಜ್, ಮಂಜು ನಾಥ್ ವಕೀಲ ಉಕ್ಕಡಗಾತ್ರಿ ಇತರರು ಹಾಜರಿದ್ದರು.

ಹೆಗ್ಗೆರೆ ರಂಗಪ್ಪ, ಲೋಕಿಕೆರೆ ಅಂಜಿನಪ್ಪ ಜಾಗೃತಿ ಗೀತೆ ಹಾಡಿದರು. ಮಂಜುನಾಥ್ ರಾಜನಹಳ್ಳಿ ಸ್ವಾಗತಿಸಿದರು. ಮಂಜುನಾಥ್ ಉಕ್ಕಡಗಾತ್ರಿ ನಿರೂಪಿಸಿದರು.

## ಸಾಲಗಾರರಿಗೆ ನಿರಾಸೆ

(1ನೇ ಪುಟದಿಂದ) ಗವರ್ನರ್ ಶಕ್ತಿಕಾಂತ ದಾಸ್, ರೆಪೋ ದರದಲ್ಲಿ ಬದಲಾವಣೆ ಮಾಡದೇ ಇರುವ ತೀರ್ಮಾನಕ್ಕೆ ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರಲ್ಲಿ 4:2ರಷ್ಟು ಸದಸ್ಯರು ಸಮ್ಮತಿ ಸೂಚಿಸಿದ್ದಾರೆ ಎಂದು ತಿಳಿಸಿದ್ದಾರೆ. ಹಿಂದಿನ ಸಭೆಯಲ್ಲಿಯೂ ಕೇಂದ್ರೀಯ ಬ್ಯಾಂಕ್ ಬಡ್ಡಿ ದರಗಳನ್ನು ಇಳಿಸದೇ ಯಥಾಸ್ಥಿತಿ ಕಾಯ್ದುಕೊಂಡಿತ್ತು. ಸತತ 11 ಸಭೆಗಳಿಂದ ಹಣದುಬ್ಬರದ ಕಾರಣಕ್ಕೆ ರೆಪೋ ದರವನ್ನು ಇಳಿಕೆ ಮಾಡದೆ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿದೆ. ಆರ್‌ಬಿಐ ರೆಪೋ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವುದರಿಂದ ಮೊದಲಿನಷ್ಟೇ ಅಂದರೆ ಶೇ. 6.50ರಲ್ಲೇ ಉಳಿಸಿಕೊಂಡಿದೆ. ಕೊನೆಯದಾಗಿ ಕಳೆದ ವರ್ಷದ ಫೆಬ್ರವರಿ 8, 2023ರಂದು ರೆಪೋ ಹಾಗೂ ರಿವರ್ಸ್ ರೆಪೋ ದರಗಳಲ್ಲಿ ಆರ್‌ಬಿಐ ಬದಲಾವಣೆ ತಂದಿತ್ತು.

## ಪ್ರಾಂಶುಪಾಲರನ್ನೇ ಗುಂಡಿಕ್ಕಿ ಕೊಂದ ವಿದ್ಯಾರ್ಥಿ

(1ನೇ ಪುಟದಿಂದ) ಧಮೋರಾ ಸರ್ಕಾರಿ ಪ್ರೌಢ ಶಾಲೆಯ ಶೌಚಾಲಯದ ಬಳಿ ಸ್ಥಳೀಯವಾಗಿ ತಯಾರಿಸಿದ ಪಿಸ್ತೂಲ್‌ನಿಂದ ಪ್ರಾಂಶುಪಾಲ ಎಸ್. ಕೆ. ಸಕ್ಸೇನಾ (55) ಅವರ ತಲೆಗೆ ಗುಂಡು ಹಾರಿಸಿದ್ದಾನೆ. ಅವರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧೀಕ್ಷಕ ಆಗಮ್ ಜೈನ್ ಹೇಳಿದ್ದಾರೆ.

## ನಗರದಲ್ಲಿ ಇಂದು ರಾಜ್ಯಮಟ್ಟದ ಅಂತರ ಶಾಲಾ-ಕಾಲೇಜು ಹಂತದ 'ಸಂಭ್ರಮ್'

ದಾವಣಗೆರೆ, ಡಿ. 6- ನಗರದ ಹೊರವಲಯದ ಬಾಪೂಜಿ ವಿದ್ಯಾಸಂಸ್ಥೆಯ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿ ಶಾಲೆ ಮತ್ತು ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಪಿಯು ಕಾಲೇಜು ಶಿವಗಂಗೋತ್ರಿ ತೋಳಹುಣಸೆಯಲ್ಲಿ ನಾಳೆ ದಿನಾಂಕ 7 ರ ಶನಿವಾರ ಐದನೇ ಆವೃತ್ತಿಯ ರಾಜ್ಯಮಟ್ಟದ ಅಂತರ್ ಶಾಲಾ-ಕಾಲೇಜು ಹಂತದ 'ಸಂಭ್ರಮ್' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪಿಎಸ್‌ಎಸ್‌ಇಆರ್ ಶಾಲೆಯ ಕನ್ನಡ ಉಪನ್ಯಾಸಕ ಶಂಕರ್ ನೆಸ್ವಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಿಎಸ್‌ಎಸ್‌ಇಎಂ ಆರ್ ಶಾಲೆ ತೋಳಹುಣಸೆ, ಎಸ್‌ಪಿಎಸ್‌ಎಸ್ ಪಿಯು ಕಾಲೇಜು ತೋಳಹುಣಸೆ, ಬಿಹೆಚ್‌ಪಿಇಎಂ ಶಾಲೆ ಮತ್ತು ಎಸ್‌ಎಸ್‌ಎನ್‌ಪಿಎಸ್ ಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ ಎಂದರು.

ಚಿತ್ರನಟ ನವೀನ್ ಶಂಕರ್, ಸಂಖ್ಯಾ ಮಾಂತ್ರಿಕ ಬಸವರಾಜ್ ಶಂಕರ್ ಉಮಾರಾಣಿ, ವಾಸ್ತು ಶಿಲ್ಪಿ ಅನೂಪ್ ಆಗಮಿಸಲಿದ್ದಾರೆ. ಶಾಲೆಯ ಅಧ್ಯಕ್ಷ ಎಸ್.ಎಸ್. ಗಣೇಶ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಾಲೆಯ ಮುಖ್ಯಸ್ಥ ಮಂಜುನಾಥ್ ರಂಗರಾಜ್ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ಸಂಯೋಜಕ ಪ್ರಭು ಪುರವಂತರ, ಉಪಾಧ್ಯಕ್ಷ ಹೆಚ್.ಜಿ. ಉಮಾಪತಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಅಖಿಲ ಭಾರತ ಗೃಹ ರಕ್ಷಕ ದಳ ದಿನಾಚರಣೆ

ದಾವಣಗೆರೆ ಜಿಲ್ಲಾ ಗೃಹರಕ್ಷಕದಳ ವತಿಯಿಂದ ಅಖಿಲ ಭಾರತ ಗೃಹ ರಕ್ಷಕ ದಳ ದಿನಾಚರಣೆ ಕಾರ್ಯಕ್ರಮವು ಇಂದು ಸಂಜೆ 4ಕ್ಕೆ ನಗರದ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆ ಕವಾಯತು (ಡಿ.ಎ.ಆರ್.) ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಗೌರವ ರಕ್ಷೆ ಸ್ವೀಕರಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಹಾಜರಿರುವರು. ಜಿಲ್ಲಾ ಕಮಾಂಡೆಂಟ್ ಹೋಂ ಗಾರ್ಡ್ಸ್ ಡಾ. ಎಸ್.ಹೆಚ್. ಸುಜಿತ್‌ಕುಮಾರ್ ಅವರು ಅಧ್ಯಕ್ಷತೆ ವಹಿಸುವರು.

## ಕಾನೂನು, ಕಾಯ್ದೆಗಳಿಗೆ ಸಂವಿಧಾನವೇ ಅಡಿಪಾಯ



ಹರಿಹರದ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ಕೋರ್ಟ್ ನ್ಯಾಯಾಧೀಶರಾದ ಪದ್ಮಶ್ರೀ ಮುನ್ನೋಳಿ

ಹರಿಹರ, ಡಿ.6- ಪವಿತ್ರ ವಕೀಲ ವೃತ್ತಿಯ ಮೂಲಕ ಜನ ಸಾಮಾನ್ಯರ ಸಂಕಷ್ಟಗಳನ್ನು ನಿವಾರಿಸಲು ಸಾಧ್ಯವಿದೆ ಎಂದು ಇಲ್ಲಿನ ಹಿರಿಯ ಸಿವಿಲ್ ಕೋರ್ಟ್ ನ್ಯಾಯಾಧೀಶರಾದ ಪದ್ಮಶ್ರೀ ಮುನ್ನೋಳಿ ಹೇಳಿದರು.

ನಗರದ ನ್ಯಾಯಾಲಯ ಸಂಕೀರ್ಣದ ಆವರಣದಲ್ಲಿ ಈಚೆಗೆ ವಕೀಲರ ಸಂಘದಿಂದ ಆಯೋಜಿಸಿದ್ದ ವಕೀಲರ ದಿನಾಚರಣೆ ಮತ್ತು ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾ ನೂ ನು ಗ ಳ ಸಹಾಯದಿಂದ ತಮ್ಮ ಕಕ್ಷಿದಾರರಿಗೆ ಅಗತ್ಯ ಸೇವೆ ನೀಡುತ್ತಲೇ ನಮ್ಮ ಸುತ್ತ-ಮುತ್ತಲಿನ ವಾತಾವರಣದಲ್ಲಿ ಜನ ಸಾಮಾನ್ಯರು ಎದುರಿಸುತ್ತಿರುವ ಸಂಕಷ್ಟಗಳನ್ನು ನಿವಾರಿಸುವ ಶಕ್ತಿ ವಕೀಲರಿಗಿದೆ ಎಂದರು.

ದೇಶದ ಕಾನೂನು ಮತ್ತು ಕಾಯ್ದೆಗಳಿಗೆ ಸಂವಿಧಾನವೇ ಅಡಿಪಾಯವಾಗಿದೆ ಮತ್ತು ಈ ಲಿಖಿತ ಸಂವಿಧಾನ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಿದರು.

ವಕೀಲರ ಸಂಘದ ಅಧ್ಯಕ್ಷ ಬಿ. ಆನಂದ ಕುಮಾರ್ ಮಾತನಾಡಿ, ನ್ಯಾಯಾಲಯ ಸಂಕೀರ್ಣದ ಆವರಣದಲ್ಲಿ ವಕೀಲರ ಭವನ ಕಟ್ಟಡ ನಿರ್ಮಾಣಕ್ಕೆ ಪ್ರಯತ್ನಿಸಲಾಗುತ್ತಿದೆ. ಜನಪ್ರತಿನಿಧಿಗಳ ಸಹಕಾರದಿಂದ ಈ ಯೋಜನೆ ಜಾರಿಗೊಳಿಸಬೇಕಿದೆ. ವಕೀಲರ ಭವನ ಇಲ್ಲದೆ ವಕೀಲರ ಸಂಘದ ಚಟುವಟಿಕೆಗಳನ್ನು ನಡೆಸಲು ಅಡಚಣೆಯಾಗಿದೆ ಎಂದರು.

ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಹಾಗೂ ವಕೀಲ ಮಾರುತಿ ಬೇಡರ್ ಅವರನ್ನು ಸತ್ಕರಿಸಲಾಯಿತು. ಕ್ರೀಡೆಗಳಲ್ಲಿ ವಿಜೇತರಾದ ವಕೀಲರಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ವೀಣಾ ಕೋಳೇಕರ, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಧೀಶರಾದ ಜ್ಯೋತಿ ಅಶೋಕ್ ಪತ್ತರ್, ಸಂಘದ ಉಪಾಧ್ಯಕ್ಷೆ ಕೆ.ಎಸ್.ಶುಭ, ಕಾರ್ಯದರ್ಶಿ ಕೆ.ವಿ. ನಾಗರಾಜ್, ಸಹ ಕಾರ್ಯದರ್ಶಿ ಬಿ.ಸಿ. ಪ್ರಕಾಶ್, ಹಿರಿಯ ವಕೀಲರಾದ ಬಿ. ಹಾಲಪ್ಪ, ಕಿತ್ತೂರು ಶೇಖ್ ಇಬ್ರಾಹಿಂ, ಎಚ್.ಎಂ.ಷಡಕ್ಷರಯ್ಯ, ಎಸ್. ಪ್ರಸನ್ನಕುಮಾರ್, ಬಿ. ನಾಗರಾಜ್, ನಾಗೇಂದ್ರಪ್ಪ, ನಾಗರಾಜ್ ಹಲವಾಗಲು, ಪಿ. ರುದ್ರಗೌಡ, ಮಂಜಣ್ಣ ಇತರರು ಇದ್ದರು.


## ಸಾಮೂಹಿಕ ವಿವಾಹ ಮಹೋತ್ಸವಕ್ಕೆ ಸಿ.ಎಂ. ಹಾಗೂ ಸಚಿವರಿಗೆ ಆಹ್ವಾನ



ದಾವಣಗೆರೆ, ಡಿ.6- ಜಿಲ್ಲಾ ಮಾದಿಗ ಮತ್ತು ಚಲವಾದಿ ಸಮಾಜಗಳ ಸಮಾವೇಶವನ್ನು ಹಾಗೂ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮವನ್ನು ಇದೇ ದಿನಾಂಕ 15 ರಂದು ನಗರದ ಶ್ರೀಮತಿ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ಮಹಾನಗರಪಾಲಿಕೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮಕ್ಕೆ ಆಗಮಿಸುವಂತೆ ಸಿಎಂ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರನ್ನು ಮಾದಿಗ ಸಮಾಜದ ಹಿರಿಯ ಮುಖಂಡರಾದ ಬಿ.ಹೆಚ್ ವೀರಭದ್ರಪ್ಪ, ನಿವೃತ್ತ ಎಸ್ಪಿ ರವಿನಾರಾಯಣ್, ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷರೂ ಆದ ನಿವೃತ್ತ ಎಸ್ಪಿ ರುದ್ರಮುನಿ ಹಾಗೂ ಸಮಾಜದ ಮುಖಂಡರುಗಳ ನಿಯೋಗವು ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ಭೇಟಿ ಮಾಡಿ ಆಹ್ವಾನಿಸಿತು.

## 'ಪುಷ್ಪ 2' ಮೊದಲ ದಿನವೇ 294 ಕೋಟಿ ರೂ. ಗಳಿಕೆ



ನವದೆಹಲಿ, ಡಿ.6- ಪುಷ್ಪ 2' ಸಿನಿಮಾ ಮೊದಲ ದಿನವೇ 294 ಕೋಟಿ ರೂ. ಗಳಿಕೆ ಮಾಡಿದೆ.

ಚಿ ತ್ರ ವ ನ್ನು ನಿರ್ಮಾಣ ಮಾಡಿರುವ 'ಮೈತ್ರಿ ಮೂವೀ ಮೇಕರ್ಸ್' ಸಂಸ್ಥೆಯೇ ಈ ಕುರಿತು ಹೇಳಿಕೊಂಡಿದೆ. ಇದು ಸಾರ್ವಕಾಲಿಕ ದಾಖಲೆ ಯಾಗಿ ಭಾರತೀಯ ಚಿತ್ರರಂಗದಲ್ಲಿ ದಾಖಲಾಗಿದೆ.

ಭಾರತದ ಯಾವ ಸಿನಿಮಾವು ಈವರೆಗೂ ಇಷ್ಟೊಂದು ದೊಡ್ಡ ಪ್ರಮಾಣದ ಹಣವನ್ನು ಮೊದಲ ದಿನವೇ ಬಾಚಿಕೊಂಡಿರಲಿಲ್ಲ. ಆದರೆ 'ಪುಷ್ಪ-2' ಆ ಕೆಲಸವನ್ನು ಮಾಡಿದೆ.

ಎಸ್‌ಎಸ್ ರಾಜಮೌಳಿ ಅವರ 'ಆರ್‌ಆರ್‌ಆರ್' (ರೂ. 223.5 ಕೋಟಿ), ನಂತರ 'ಬಾಹುಬಲಿ 2' (ರೂ. 217 ಕೋಟಿ) ಮತ್ತು 'ಕಲ್ಕಿ 2898 AD' (175 ಕೋಟಿ ರೂ.) ಗಳಿಸಿದ್ದವು.

ಈ 294 ಕೋಟಿ ರೂ.ಗಳಲ್ಲಿ ಬರೀ ಹಿಂದಿ ವರ್ಷನ್‌ನಿಂದಲೇ 72 ಕೋಟಿ ರೂ. ಹಣ ಬಂದಿದೆ. ಬಾಲಿವುಡ್‌ನ ಅನಿಮಲ್ (63.80 ಕೋಟಿ ರೂ.), ಪಠಾಣ್ (57 ಕೋಟಿ ರೂ.), ಸ್ತ್ರೀ 2 (55.40 ಕೋಟಿ ರೂ.), ವಾರ್ (53.35 ಕೋಟಿ ರೂ.) ಸಿನಿಮಾಗಳ ದಾಖಲೆಗಳನ್ನು ಅಳಿಸಿ ಹಾಕಿದೆ 'ಪುಷ್ಪ 2' ಸಿನಿಮಾ. ಇನ್ನು, 'ಕೆಜಿಎಫ್ ಚಾಪ್ಟರ್ 2' ಸಿನಿಮಾದ ಹಿಂದಿ ವರ್ಷನ್‌ನಿಂದ ಮೊದಲ ದಿನ 53.95 ಕೋಟಿ ರೂ. ಹಣ ಹರಿದುಬಂದಿತ್ತು. ಆ ದಾಖಲೆಯನ್ನು ಕೂಡ 'ಪುಷ್ಪ 2' ಬ್ರೇಕ್ ಮಾಡಿದೆ.

## ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಪ್ರಬಲ ಭೂಕಂಪ

ನವದೆಹಲಿ, ಡಿ6- ಅಮೆರಿಕದ ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಶುಕ್ರವಾರ ಪ್ರಬಲ ಭೂಕಂಪನ ಸಂಭವಿಸಿದ್ದು, ಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 7.0ರಷ್ಟು ದಾಖಲಾಗಿದೆ.

ಅಮೆರಿಕ ಭೂಕಂಪನ ಮಾಪನ ಇಲಾಖೆ ಈ ಬಗ್ಗೆ ಮಾಹಿತಿ ನೀಡಿದ್ದು, 7.0 ತೀವ್ರತೆಯ ಭೂಕಂಪನದ ಕೇಂದ್ರ ಬಿಂದುವು ಕ್ಯಾಲಿಫೋರ್ನಿಯಾದ ಫರ್ಂಡೇಲ್‌ನ ಪಶ್ಚಿಮ-ನೈಋತ್ಯಕ್ಕೆ ಸುಮಾರು 100 ಕಿಲೋಮೀಟರ್ (ಆರು ಮೈಲುಗಳು) ಆಳದಲ್ಲಿ ದಾಖಲಾಗಿದೆ.

ಭೂಕಂಪದ ಬೆನ್ನಲ್ಲೇ ಕ್ಯಾಲಿಫೋರ್ನಿಯಾದ ಕರಾವಳಿ ಪ್ರದೇಶದಲ್ಲಿ ಸುನಾಮಿ ಎಚ್ಚರಿಕೆ ನೀಡಲಾಗಿತ್ತು. ಬಳಿಕ ಸುನಾಮಿಯ ಯಾವುದೇ ಮುನ್ಸೂಚನೆ ದೊರೆಯದ ಹಿನ್ನೆಲೆಯಲ್ಲಿ ಎಚ್ಚರಿಕೆಯನ್ನು ಹಿಂಪಡೆಯಲಾಗಿದೆ.

## ಅಣಜಿ ಶೆಟ್ರು ವೀರಮ್ಮ ನಿಧನ




ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮದ ದಿ.ಶೆಟ್ರು ಕೊಟ್ರಬಸಪ್ಪನವರ ಧರ್ಮಪತ್ನಿ **ಶ್ರೀಮತಿ ಶೆಟ್ರು ವೀರಮ್ಮ** (90 ವರ್ಷ) ಇವರು ದಿನಾಂಕ 06.12.2024ನೇ ಶುಕ್ರವಾರ ಸಂಜೆ 5.34ಕ್ಕೆ ನಿಧನರಾದರು.

ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು **ದಿನಾಂಕ 07.12.2024ರ ಶನಿವಾರ ಅಣಜಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.**

**- ದುಃಖತಪ್ತ ಕುಟುಂಬ ವರ್ಗ, ಮೊ: 88803 36693, 99801 94505**

## ಭಾವಪೂರ್ವ ಶ್ರದ್ಧಾಂಜಲಿ



ಹಡಗಲಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ., ಹೂವಿನಹಡಗಲಿ ಇದರ ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರಾದ

**ಶ್ರೀ ಟಿ.ಲಾಲ್ಯಾನಾಯ್ಕ**

ಇವರು, ದಿನಾಂಕ 05-12-2024ನೇ ಗುರುವಾರದಂದು ಮಧ್ಯಾಹ್ನ 3 ಗಂಟೆಗೆ ನಿಧನರಾಗಿರುತ್ತಾರೆ. ಇವರಿಗೆ ಪರಮಾತ್ಮನು ಆತ್ಮಶಾಂತಿಯನ್ನು ನೀಡಲಿ ಎಂದು ಅವರಿಗೆ ಒಂದು ನಿಮಿಷ ಮೌನವನ್ನು ಆಚರಿಸಿ ಮತ್ತು ಅವರ ಕುಟುಂಬಕ್ಕೆ ದುಃಖ ಸಹಿಸುವ ಶಕ್ತಿಯನ್ನು ಆ ಪರಮಾತ್ಮನು ದಯಪಾಲಿಸಲಿ ಎಂದು ಪ್ರಾರ್ಥಿಸಲಾಯಿತು.

**ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಡಗಲಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ., ಹೂವಿನಹಡಗಲಿ**

## ರೈತರ ದೆಹಲಿ ಪಾದಯಾತ್ರೆ ಸ್ಥಗಿತ

(1ನೇ ಪುಟದಿಂದ) ಮೋರ್ಚಾ ಸಭೆ ನಡೆಸಲಿದ್ದು, ಬಳಿಕ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಿವೆ ಎಂದೂ ಅವರು ಹೇಳಿದ್ದಾರೆ. ದೆಹಲಿಗೆ ರೈತರ ಪಾದಯಾತ್ರೆ ಹಿನ್ನೆಲೆಯಲ್ಲಿ ಹರಿಯಾಣ ಗಡಿ ಭಾಗದಲ್ಲಿ ಭಾರೀ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇಂದು ಶುಕ್ರವಾರ ಮಧ್ಯಾಹ್ನ 101 ರೈತರನ್ನು ಒಳಗೊಂಡ ಗುಂಪು ಶಂಭು ಗಡಿಯಿಂದ ದೆಹಲಿಗೆ ಪಾದಯಾತ್ರೆಯನ್ನು ಪ್ರಾರಂಭಿಸಿತ್ತು.

ಪ್ರತಿಭಟನಾನಿರತ ರೈತರನ್ನು ಚದುರಿಸಲು ಭದ್ರತಾ ಸಿಬ್ಬಂದಿ ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದ್ದಾರೆ. ಕೆಲ ರೈತರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿರಿಸಿ ರೈತರು ದೆಹಲಿ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ.

## ಕಕ್ಕರಗೊಳ್ಳದ ಯಶೋಧಮ್ಮ ನಿಧನ



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿ ಎಂ. ಈಶ್ವರಪ್ಪನವರ ಧರ್ಮಪತ್ನಿ ಶ್ರೀಮತಿ ಯಶೋಧಮ್ಮ (64) ಅವರು ದಿನಾಂಕ 6.12.2024ರ ಶುಕ್ರವಾರ ರಾತ್ರಿ 8.45ಕ್ಕೆ ನಿಧನರಾದರು. ಪತಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.12.2024ರ ಶನಿವಾರ ಮಧ್ಯಾಹ್ನ 12.30ಕ್ಕೆ ಕಕ್ಕರಗೊಳ್ಳದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

## 15ಕ್ಕೆ ಜೆಡಿಎಸ್ ಸಮ್ಮೇಳನ

(1ನೇ ಪುಟದಿಂದ) ಗಳನ್ನು ಜನರ ಮುಂದಿಡಲು ಕುಮಾರಸ್ವಾಮಿ ವೇದಿಕೆ ಬಳಸಿಕೊಳ್ಳಲಿದ್ದಾರೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮುಂದಾಳತ್ವದಲ್ಲಿ ಸಮಾವೇಶ ನಡೆಯಲಿದ್ದು, ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿಗೆ ಪಕ್ಷದಲ್ಲಿ ದೊಡ್ಡ ಹುದ್ದೆಯನ್ನು ಕುಮಾರಸ್ವಾಮಿ ವೇದಿಕೆಯಲ್ಲೇ ಘೋಷಣೆ ಮಾಡಲಿದ್ದಾರಂತೆ.

ಪಕ್ಷದಲ್ಲಿದ್ದುಕೊಂಡೇ ನಾಯಕರ ಮೇಲೆ ಮುನಿಸಿಕೊಂಡಿರುವ ಹಿರಿಯ ಶಾಸಕ ಜಿ.ಟಿ.ದೇವೇಗೌಡ ಸೇರಿದಂತೆ, ಕೆಲವರ ಮನವೊಲಿಸಿ ಪಕ್ಷದಲ್ಲೇ ಉಳಿಸಿಕೊಳ್ಳುವ ಕಾರ್ಯ ಸಮಾವೇಶಕ್ಕೂ ಮುನ್ನ ಕಾರ್ಯಕ್ರಮದ ಆಯೋಜಕರಿಂದ ನಡೆಯಲಿದೆ.

ಪುಟ್ಟರಾಜು ಹಾಗೂ ಮಹೇಶ್ ಅವರುಗಳು, ಜಿ.ಟಿ. ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿ, ನಂತರ ದೇವೇಗೌಡರ ಬಳಿ ಕರೆತಂದು ಸಂಧಾನ ನಡೆಸಲು ಮುಂದಾಗಿದ್ದಾರೆ.

ಹಾಸನದ ಸಮಾವೇಶದಲ್ಲಿ ತಮ್ಮ ಹಾಗೂ ತಮ್ಮ ಕುಟುಂಬದ ಬಗ್ಗೆ ಇಲ್ಲದ ರಾಜಕೀಯ ವಿಷಯಗಳನ್ನು ಪ್ರಸ್ತಾಪಿಸಿರುವ ಸಿದ್ದರಾಮಯ್ಯ ಅವರಿಗೆ ಸ್ವತಃ ದೇವೇಗೌಡರೇ ಅಂದಿನ ಸಭೆಯಲ್ಲಿ ಉತ್ತರ ನೀಡಲಿದ್ದಾರಂತೆ. ಕುಟುಂಬ ವಿಷಯವಲ್ಲದೆ, ಜೆಡಿಎಸ್ ಪಕ್ಷದ ವಿರುದ್ಧವೂ ಮನಬಂದಂತೆ ಸಿದ್ದರಾಮಯ್ಯ ವಾಗ್ದಾಳಿ ಮಾಡಿದ್ದು, ಇವೆಲ್ಲಕ್ಕೂ ತಕ್ಷಣವೇ ಉತ್ತರ ನೀಡಲು ಮಂಡ್ಯದಲ್ಲೇ ಅಭಿನಂದನಾ ಸಮಾರಂಭದ ನೆಪದಲ್ಲಿ ಸಮಾವೇಶ ನಡೆಯಲಿದೆ.

## ಕೆ. ಕೆಂಚನಗೌಡ ನಿಧನಕ್ಕೆ ಜಿಲ್ಲಾ ಕಸಾಪ ಕಂಬನಿ

ದಾವಣಗೆರೆ, ಡಿ.6-ಶ್ರೀ ತರಳಬಾಳು ಜಗದ್ಗುರು ವಿದ್ಯಾ ಸಂಸ್ಥೆಯ ವಿವಿಧ ಪ್ರೌಢಶಾಲೆಗಳಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಕೆ.ಕೆಂಚನಗೌಡ ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

ತಾನು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದಾಗ, ಕೋಶಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ಕೆಂಚನಗೌಡ ಅವರ ನಾಡು - ನುಡಿಯ ಸೇವೆ ಶ್ಲಾಘನೀಯ ಎಂದು ವಾಮದೇವಪ್ಪ ಹೇಳಿದ್ದಾರೆ.

ತಮ್ಮ 90ನೇ ವಯಸ್ಸಿನಲ್ಲಿಯೂ ಉತ್ತರ ಭಾರತದ ಪ್ರವಾಸ ಅದರಲ್ಲೂ ಮುಖ್ಯವಾಗಿ ಕಾಶಿ ಶ್ರೀ ವಿಶ್ವನಾಥನ ದರ್ಶನ, ಅಯೋಧ್ಯೆಯ ಶ್ರೀರಾಮಚಂದ್ರನ ದರ್ಶನ ಪಡೆದ ಹೆಗ್ಗಳಿಕೆ ಅವರದಾಗಿತ್ತು ಎಂದು ಅವರು ಸ್ಮರಿಸಿದ್ದಾರೆ.

## ಕುಸ್ತಿ ಕ್ರೀಡೆ ದೇಶದ ಸಂಸ್ಕೃತಿಯನ್ನು ಬಿಂಬಿಸುತ್ತದೆ



ಹರಪನಹಳ್ಳಿಯಲ್ಲಿನ ಅಂತರ್ ಕಾಲೇಜು ಕುಸ್ತಿ ಪಂದ್ಯಾವಳಿಯಲ್ಲಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ, ಡಿ.6- ಕುಸ್ತಿ ಕ್ರೀಡೆ ದೇಶದ ಕಲೆಯಾಗಿದ್ದು, ಈ ಕ್ರೀಡೆ ದೇಶದ ಸಂಸ್ಕೃತಿಯನ್ನು ಬಿಂಬಿಸುತ್ತದೆ ಎಂದು ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ವಿದ್ಯಾಲಯ ಮಟ್ಟದ ಪುರುಷ ಹಾಗೂ ಮಹಿಳೆಯರ ಅಂತರ್ ಕಾಲೇಜು ಕುಸ್ತಿ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಶಕ್ತಿ ಮತ್ತು ಯುಕ್ತಿಯ ಸಮ್ಮಿಲನ ಕುಸ್ತಿಯಲ್ಲಿ ಕಾಣಬಹುದು. ಯಾವ ಆಯುಧವನ್ನೂ ಬಳಸದೇ ಒಬ್ಬರನ್ನೊಬ್ಬರು ಸೆಣಸಿ ಗೆಲ್ಲುವ ಈ ಕ್ರೀಡೆಗೆ ದೇಶದಲ್ಲಿ ಇತಿಹಾಸವಿದೆ. ಆದರೆ ಪ್ರಸ್ತುತ ಗರಡಿ ಮನೆಗಳು ಮರೀಚಿಕೆಯಾಗಿ ಜಿಮ್‌ಗಳು ತಲೆ ಎತ್ತಿವೆ ಎಂದು ಹೇಳಿದರು.

ಒಲಂಪಿಕ್‌ನಲ್ಲಿ ದೇಶಕ್ಕೆ ಕುಸ್ತಿಯಿಂದಲೇ ಹೆಚ್ಚು ಪದಕಗಳು ಬಂದಿವೆ. ಹಂಪಿ ಉತ್ಸವದ ರೂವಾರಿಯಾಗಿದ್ದ ಎಂ.ಪಿ.ಪ್ರಕಾಶರವರು ಕುಸ್ತಿಗೆ ಆದ್ಯತೆ ನೀಡಿದ್ದರು ಎಂದ ಅವರು, ಸೌಹಾರ್ದತೆಯಿಂದ ಕ್ರೀಡೆಯಲ್ಲಿ ಪಾಲ್ಗೊಂಡು ಕ್ರೀಡಾಭಿಮಾನ ತೋರಿಸಿ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಸತೀಶ್ ಮಾತನಾಡಿ, ಊರಿನ ಪ್ರತಿಷ್ಠೆಯ ಕೇಂದ್ರಗಳಾಗಿದ್ದ ವ್ಯಾಯಾಮ ಶಾಲೆಗಳ ಪೈಕಿ ಬಹುತೇಕ ಶಾಲೆಗಳಲ್ಲಿ ಈಗ ಕುಸ್ತಿ ಪೈಲ್ವಾನರು ತಯಾರಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕ್ರೀಡಾಪಟುಗಳಲ್ಲಿ ಶ್ರಮ, ಏಕಾಗ್ರತೆ ಮತ್ತು ಗುರಿ ಬಹಳ ಮುಖ್ಯ. ಇಂತಹ ಪಟುಗಳಿಗೆ ಗುಣಮಟ್ಟದ ತರಬೇತಿ ಸಿಕ್ಕಾಗ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವರು ಸಾಧನೆ ಮಾಡಲು ಸಾಧ್ಯ ಎಂದರು.

ಇದೇ ವೇಳೆ ಕಾಲೇಜಿನಲ್ಲಿ ಶುದ್ಧ ಕುಡಿಯುವ ನೀರು ಹಾಗೂ ರಸ್ತೆ ಬದಿ ಲೈಟಿಂಗ್ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಶಾಸಕರಿಗೆ ಮನವಿ ಸಲ್ಲಿಸಿದರು.

ಈ ವೇಳೆ ದೈಹಿಕ ಶಿಕ್ಷಣ ನಿರ್ದೇಶಕ ಹೆಚ್. ಕೊಟ್ರೇಶ, ಕಸಾಪ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚಂಗೆಪ್ಪ, ಡಾ. ಶಾಂತನಾಯ್ಕ, ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಎಂ.ಆರ್ ಹವಳದ್, ಕೂಡ್ಲಿಗಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಎಸ್.ಷಣ್ಮುಖಗೌಡ, ಹೂವಿನ ಹಡಗಲಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ವಿಜಯಕುಮಾರ, ಕೊಟ್ಟೂರಿನ ಕೊಟ್ಟೂರೇಶ್ವರ ಮಹಾವಿದ್ಯಾಲಯದ ಡಾ. ರವಿಕುಮಾರ, ವಕೀಲರಾದ ಕೆ.ಎಂ. ಚಂದ್ರಮೌಳಿ, ಡಾ.ಎಂ. ಸುರೇಶ, ಡಾ. ಹಾರಳ್ ಬುಳ್ಳಪ್ಪ, ಹುಚ್ಚರಾಯಪ್ಪ ಪುನೀತ ಇತರರು ಇದ್ದರು.

# ಒಳ್ಳೆಯ ರಸ್ತೆ ಒಡೆದು, ಹೊಸ ರಸ್ತೆ ನಿರ್ಮಾಣ ತೆರಿಗೆ ಹಣದ ಪೋಲು: ವಿಪಕ್ಷ ನಾಯಕ ಪ್ರಸನ್ನ



ದಾವಣಗೆರೆ, ಡಿ.6- ನಗರದ ಶಿವಪ್ಪಯ್ಯ ವೃತ್ತದಿಂದ - ಡಾಂಗೆ ಪಾರ್ಕ್ ಮುಖಾಂತರ ನಿಟ್ಟುವಳ್ಳಿ ಮುಖ್ಯರಸ್ತೆ ಅಗಲೀಕರಣದ ನೆಪದಲ್ಲಿ, ಒಳ್ಳೆಯ ರಸ್ತೆಯನ್ನು ಒಡೆದು, ಹೊಸ ರಸ್ತೆ ನಿರ್ಮಾಣ ಮಾಡುತ್ತಿರುವುದನ್ನ ವಿರೋದಿಸುತ್ತೇವೆ.

ಹಾಲಿ ಇರುವ ರಸ್ತೆಯನ್ನು ಹೊಡೆದು ಹೊಸ ರಸ್ತೆ ನಿರ್ಮಾಣ ಮಾಡಲು ಸಾರ್ವಜನಿಕರ ವಿರೋಧವೂ ಇದೆ, ವಿಷಯವನ್ನು ತಿಳಿದ ವಿಪಕ್ಷ ನಾಯಕ ಪ್ರಸನ್ನ ಕುಮಾರ್ ನೇತೃತ್ವದ ಬಿಜೆಪಿ ಪಾಲಿಕೆ ಸದಸ್ಯರ ತಂಡ ರಸ್ತೆ ಕಾಮಗಾರಿ ನಡೆಯುವ ಸ್ಥಳ ಪರಿಶೀಲಿಸಿ ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸಲಾಯಿತು.

ಸಾರ್ವಜನಿಕ ಮನವಿಗೆ ಸ್ಪಂದಿಸಿದರು, ಹಾಲಿ ರಸ್ತೆ ಉತ್ತಮವಾಗಿದ್ದು, ನಗರದಲ್ಲಿ ಅನೇಕ ರಸ್ತೆಗಳಲ್ಲಿ ಬಿದ್ದಿರುವ ಗುಂಡಿ ಮುಚ್ಚಲೂ ಸಾಧ್ಯವಾಗದ ಪಾಲಿಕೆ, ಸಾರ್ವಜನಿಕರ ತೆರಿಗೆ ಹಣವನ್ನೂ ಪೋಲು ಮಾಡುತ್ತಿದೆ.

ನಗರದಲ್ಲಿ ಇನ್ನೂ ಅನೇಕ ರಸ್ತೆಗಳು ಸಾರ್ವಜನಿಕರು ಓಡಾಡಲು ಸಾಹಸಪಡುವ ರೀತಿ ಇವೆ. ಆ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಿ, ಹಾಲಿ ರಸ್ತೆ ಒಡೆದು ಹೊಸ ರಸ್ತೆ ಮಾಡುವ ಬದಲು, ಇದೇ ರಸ್ತೆಯನ್ನು ಅಗಲೀಕರಣ ಮಾಡಿ, ಫುಟ್‌ಪಾತ್, ಚರಂಡಿ ನಿರ್ಮಾಣ ಮಾಡಲಿ ಎಂದು ಆಯುಕ್ತರಿಗೆ ಆಗ್ರಹಿಸಿ, ಮನವಿ ಮಾಡಲಾಯಿತು.

ಪಾಲಿಕೆ ಸದಸ್ಯರಾದ ಆರ್. ಶಿವಾನಂದ್, ವೀರೇಶ್ ಕೆ.ಎಂ., ವೀರೇಶ್ ಎಸ್.ಟಿ., ಬಿಜೆಪಿ ಮುಖಂಡರಾದ ಜಯಪ್ರಕಾಶ್, ಸುರೇಶ್, ಯೋಗೀಶ್, ಲಕ್ಷ್ಮಣ ಇದ್ದರೂ.

# ಶ್ರೀ ಪದ್ಮನಾಭ ತೀರ್ಥರು ಮಧ್ವ ಸಿದ್ಧಾಂತವನ್ನು ಪ್ರಕಾಶಿಸಿದವರು : ಗೋಪಾಲಾಚಾರ್ ಮಣ್ಣೂರು



ದಾವಣಗೆರೆ, ಡಿ.6- ಶ್ರೀ ಪದ್ಮನಾಭ ತೀರ್ಥರು ಮಧ್ವ ಸಿದ್ಧಾಂತವನ್ನು ಉತ್ತಮ ರೀತಿಯಲ್ಲಿ ಪ್ರಕಾಶ ಪಡಿಸಿದವರು ಎಂದು ಪಂಡಿತ ಗೋಪಾಲಾಚಾರ್ ಮಣ್ಣೂರು ಹೇಳಿದರು.

ನಗರದ ಸರ್ವಜ್ಞಾಚಾರ್ಯ ಸೇವಾ ಸಂಘದಲ್ಲಿ ಭಾನುವಾರ, ಶ್ರೀ ಪದ್ಮನಾಭ ತೀರ್ಥರ ಆರಾಧನೆ ಅಂಗವಾಗಿ ನಡೆದ ಪ್ರವಚನವನ್ನು ಅವರು ನೀಡಿದರು.

ಪದ್ಮನಾಭ ತೀರ್ಥರು, ವಾಯುದೇವರ ಅವತಾರವಾದ ಶ್ರೀ ಮಧ್ವಾಚಾರ್ಯರ ಪ್ರಥಮ ಶಿಷ್ಯರಾಗಿದ್ದರು. ಇವರ ಪೂರ್ವಾಶ್ರಮದ ಹೆಸರು ಶೋಭನ ಭಟ್ಟರು. ವೇದ ಶಾಸ್ತ್ರ ಮತ್ತು ತರ್ಕ ಶಾಸ್ತ್ರದಲ್ಲಿ ಉದ್ದಾಮ ಪಂಡಿತರಾಗಿದ್ದರು. ಆ ಕಾಲದ ಅನೇಕ ಪಂಡಿತರು ಇವರನ್ನು 'ವಿದ್ವತ್ ತಿಮಿಂಗಲ' ಎಂದು ಕರೆಯುತ್ತಿದ್ದರು ಎಂದು ತಿಳಿಸಿದರು.

ಶ್ರೀ ಮಧ್ವಾಚಾರ್ಯರ ಅಗಾಧ ಪಾಂಡಿತ್ಯಕ್ಕೆ ತಲೆದೂಗಿ ಅವರಿಂದ ವೈಷ್ಣವ ದೀಕ್ಷೆ ಹೊಂದಿ ಅವರ ಶಿಷ್ಯರಾದರು. ಇವರ ಪಾಂಡಿತ್ಯ ಮತ್ತು ಜ್ಞಾನವನ್ನು ಮನಗಂಡು ಮಧ್ವಾಚಾರ್ಯರು ಇವರಿಗೆ ಆಶ್ರಮ ಕೊಟ್ಟು ಪದ್ಮನಾಭ ತೀರ್ಥರು ಎಂದು ನಾಮಕರಣ ಮಾಡಿದರು ಎಂದರು.

ಪದ್ಮನಾಭ ತೀರ್ಥರು ಮಧ್ವಾಚಾರ್ಯರ ಗ್ರಂಥಗಳಿಗೆ ಟೀಕೆ ಬರೆದಿರುವುದು ಸೇರಿದಂತೆ 15 ಕೃತಿಗಳನ್ನು ರಚಿಸಿದ್ದಾರೆ. ಇದೇ ಪರಂಪರೆಯಲ್ಲಿ ಬಂದವರಾದ ಶ್ರೀ ಜಯತೀರ್ಥರು ಪದ್ಮನಾಭ ತೀರ್ಥರಿಂದ ಪ್ರಭಾವಿತರಾಗಿದ್ದರು ಎಂದು ಹೇಳಿದರು.

ಏಳು ವರ್ಷಗಳ ಕಾಲ ಆಶ್ರಮದಲ್ಲಿದ್ದ ಪದ್ಮನಾಭ ತೀರ್ಥರು, ಒಂದರ್ಥದಲ್ಲಿ ಎಲ್ಲ ಮಾಧ್ವ ಪೀಠಗಳಿಗೆ ಮೂಲ ಪುರುಷರು. ಇವರ ವೃಂದಾವನ ಆನೆಗೊಂದಿಯ ನವ ವೃಂದಾವನ ಗಡ್ಡಿಯಲ್ಲಿದೆ ಎಂದು ತಿಳಿಸಿದರು.

ಶ್ರೀ ಪದ್ಮನಾಭತೀರ್ಥರ ಆರಾಧನಾ ಮಹೋತ್ಸವದ ಅಂಗವಾಗಿ ಶ್ರೀ ಸರ್ವಜ್ಞಾಚಾರ್ಯ ಸೇವಾ ಸಂಘದಲ್ಲಿ ಬೆಳಗ್ಗೆ ವಾಯುಸ್ತುತಿ ಪುರಶ್ಚರಣ, ನಂದಕಿಶೋರ ಭಜಾನಾ ಮಂಡಳಿಯಿಂದ ಭಜನೆ ನಡೆಯಿತು. ಸರ್ವಜ್ಞಾಚಾರ್ಯ ಸೇವಾ ಸಂಘದ ಕಾರ್ಯದರ್ಶಿ ಪ್ರಾಣೇಶ್ ಕಟ್ಟಿ, ತಾಡಪತ್ರಿ ವೆಂಕಟಗಿರಿ, ಪ್ರಕಾಶ್ ಪಾಟೀಲ್, ಆನಂದ ತೀರ್ಥಾಚಾರ್, ರಘುನಾಥ್ ಇತರರು ಇದ್ದರು.

## ಡಾ. ಪಂಡಿತ್ ಪುಟ್ಟರಾಜ ಕವಿ ಗವಾಯಿಗಳ ಹದಿನೈದನೇ ಸ್ವರ ಶ್ರದ್ಧಾಂಜಲಿ ಕಾರ್ಯಕ್ರಮ



ಕೊಟ್ಟೂರು, ಡಿ.6- ಉಭಯ ಗಾನ ವಿಶಾರದರು, ತ್ರಿಭಾಷಾ ಕವಿವರ್ಯ, ಸಕಲ ವಾದ್ಯ ಕಂಠೀರವ ನಾಡೋಜ ಹಾಗೂ ಕಾಳಿದಾಸ ಪ್ರಶಸ್ತಿ ವಿಜೇತರಾದ ಪರಮಪೂಜ್ಯ ಡಾ. ಪಂಡಿತ್ ಪುಟ್ಟರಾಜ ಗವಾಯಿಗಳವರ ಹದಿನೈದನೇ ಸ್ವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಇದೇ ದಿನಾಂಕ 13 ರ ಶುಕ್ರವಾರ ಸಂಜೆ 6 ಗಂಟೆಗೆ ಕೊಟ್ಟೂರಿನ ಇಂದು ಕಾಲೇಜ್‌ನಲ್ಲಿ ಆಯೋಜನೆ ಮಾಡಲಾಗಿದೆ. ಅಂದು ಸಂಜೆ ಕನ್ನಡ ಕೋಗಿಲೆ ಕಾರ್ಯಕ್ರಮ ಖ್ಯಾತಿಯ ಗಾಯಕಿ ಕಲಾವತಿ ದಯಾನಂದ್ ಮತ್ತು ಸರಿಗಮಪ ಸೀಸನ್ 13 ರ ಗಾಯಕಿ ಪೂಜಾ ವಿಭೂತಿಮಠ್ ಇವರಿಂದ ಸಂಗೀತ ಕಾರ್ಯಕ್ರಮವಿದೆ ಎಂದು ಸಮಿತಿಯ ಸುಧಾಕರ್ ಪಾಟೀಲ್ ತಿಳಿಸಿದ್ದಾರೆ.

## ಇಂದು ರೈತ ಭವನದ ಶಂಕುಸ್ಥಾಪನೆ

ಆನಗೋಡು

ಆನಗೋಡು ಪಾರ್ಕ್ ಪಕ್ಕದ ಉಳುಪಿನಕಟ್ಟೆ ಕ್ರಾಸ್ ಬಳಿಯ ರೈತ ಹುತಾತ್ಮರ ಸಮಾಧಿ ಸ್ಥಳದಲ್ಲಿ ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ, ದಾವಣಗೆರೆ ಜಿಲ್ಲೆಯ ರೈತಪರ ಸಂಘಟನೆಗಳು ಇವರ ಆಶ್ರಯದಲ್ಲಿ ರೈತ ಭವನದ ಶಂಕುಸ್ಥಾಪನಾ ಸಮಾರಂಭವನ್ನು ಇಂದು ಸಂಜೆ 5ಕ್ಕೆ ಹಮ್ಮಿಕೊಳ್ಳಲಾಗಿದೆ.

**ದಿವ್ಯ ಸಾನಿಧ್ಯ** : ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಮಾರಂಭದ ಮುಖ್ಯ ಅತಿಥಿಯಾಗಿ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಶಂಕುಸ್ಥಾಪನೆ: ಸಂಸದರಾದ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್ ಭಾಗವಹಿಸುವರು.

ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಶಾಸಕ ಕೆ.ಎಸ್. ಬಸವಂತಪ್ಪ, ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ ಗೌರವಾಧ್ಯಕ್ಷ ಹೆಚ್. ನಂಜುಂಡಪ್ಪ ಆಗಮಿಸುವರು.

ವಿಶೇಷ ಆಹ್ವಾನಿತರು : ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ಜಿ.ಪಂ. ಸಿ.ಇ.ಓ. ಸುರೇಶ್ ಬಿ. ಇಟ್ನಾಳ್, ಉಪವಿಭಾಗಾಧಿಕಾರಿ ಸಂತೋಷ್‌ಕುಮಾರ್, ತಹಶೀಲ್ದಾರ್ ಡಾ. ಎಂ.ವಿ. ಅಶ್ವತ್ಥ್, ಪಂಚಾಯತ್ ರಾಜ್ ಇಲಾಖೆ ಕಾರ್ಯಪಾಲಕ ಅಭಿಯಂತರ ಹೆಚ್. ಟಾಟಾ ಶಿವನ್, ಎಪಿಎಂಸಿ ಕಾರ್ಯದರ್ಶಿ ಹೆಚ್.ಸಿ.ಎಂ. ರಾಣಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ರಾಮಭೋವಿ.

## ಫ್ರಾನ್ಸ್‌ಗೆ ಶೀಘ್ರವೇ ನೂತನ ಪ್ರಧಾನ ಮಂತ್ರಿ ನೇಮಕ

ಪ್ಯಾರಿಸ್, ಡಿ.6- ಫ್ರಾನ್ಸ್‌ನ ನೂತನ ಪ್ರಧಾನ ಮಂತ್ರಿಯನ್ನು ಶೀಘ್ರವೇ ನೇಮಕ ಮಾಡಲಾಗುವುದು ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ತಿಳಿಸಿದ್ದಾರೆ. ಅದೇ ಹೊತ್ತಿಗೆ 2027ರವರೆಗೆ ತಮ್ಮ ಅಧಿಕಾರವಧಿ ಪೂರ್ಣಗೊಳಿಸುವುದಾಗಿ ಮ್ಯಾಕ್ರನ್ ತಿಳಿಸಿದ್ದಾರೆ.

ಫ್ರಾನ್ಸ್ ಪ್ರಧಾನಿ ಮಿಷೆಲ್ ಬರ್ನಿಯರ್ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯ ಅಂಗೀಕಾರವಾಗಿದೆ. ಇದರಿಂದ ಅವರು ಅಧಿಕಾರದಿಂದ ಪದಚ್ಯುತಗೊಂಡಿದ್ದಾರೆ. 1962ರ ಬಳಿಕ ಇದೇ ಮೊದಲ ಬಾರಿಗೆ ಅವಿಶ್ವಾಸ ನಿರ್ಣಯಕ್ಕೆ ಯಶಸ್ಸು ದೊರೆತಿದೆ.

ಹೊಸ ಸರ್ಕಾರ ರಚನೆ ಆಗುವವರೆಗೂ ಉಸ್ತುವಾರಿ ಪ್ರಧಾನಿಯಾಗಿ ಮಿಷೆಲ್ ಬರ್ನಿಯರ್ ಮುಂದುವರಿಯಬೇಕು ಎಂದು ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರು ಸೂಚಿಸಿದ್ದಾರೆ.

# ರಂಗಭೂಮಿ ಕಲಾವಿದರಿಗೆ ಪ್ರೋತ್ಸಾಹ ಅಗತ್ಯ



ಪೂಜ್ಯಶ್ರೀ ಬಸವೇಶ್ವರಿ ಮಾತಾಜಿ

ದಾವಣಗೆರೆ, ಡಿ. 6- ರಂಗಭೂಮಿ ಕಲಾವಿದರು ಇಂದು ತುಂಬಾ ಕಷ್ಟದಲ್ಲಿದ್ದಾರೆ. ಅಂತಹ ಕಲಾವಿದರುಗಳಿಗೆ ಸರ್ಕಾರ ಮತ್ತು ಸಾರ್ವಜನಿಕ ಪ್ರೇಕ್ಷಕ ಪ್ರಭುಗಳು ಪ್ರೋತ್ಸಾಹ ನೀಡಬೇಕೆಂದು ಮುಂಡಗೋಡು ತಾಲ್ಲೂಕು ಅತ್ತಿವೇರಿ ಬಸವ ಧಾಮದ ಪೂಜ್ಯಶ್ರೀ ಬಸವೇಶ್ವರಿ ಮಾತಾಜಿ ಕರೆ ನೀಡಿದರು.

ನಗರದ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ನಗರದ ಶ್ರೀ ಶಿವಕುಮಾರ ಸ್ವಾಮಿ ಬಡಾವಣೆ ಎರಡನೇ ಹಂತದಲ್ಲಿರುವ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದ ಬಯಲು ರಂಗ ಮಂದಿರದಲ್ಲಿ ಏರ್ಪಡಿಸಿದ್ದ 'ಕಿವುಡ ಮಾಡಿದ ಕಿತಾಪತಿ' ಎಂಬ ಸಾಮಾಜಿಕ ನಾಟಕ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿಕೊಂಡು ತಬಲಾ ನುಡಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯರಿಗೆ, ಸಂಸಾರದಲ್ಲಿ ಬಳಲಿರುವ ಜೀವಿಗಳಿಗೆ ಕಲೆ ಸಂಜೀವಿನಿಯಾಗಿದೆ. ಮಹಾತ್ಮ ಗಾಂಧೀಜಿ, ರಾಮಕೃಷ್ಣ ಪರಮಹಂಸರು ಕೂಡ ನಾಟಕಗಳನ್ನು ನೋಡಿ ಪ್ರಭಾವಿತರಾದವರು. ಕಲೆಯ ಸಾಹಿತ್ಯ ಮನುಷ್ಯನಿಗೆ ಅಗತ್ಯವಾಗಿ ಬೇಕಾಗಿದೆ. ಕಲಾವಿದರಿಗೆ ಸಾವಿರಾರು ಪ್ರೇಕ್ಷಕರನ್ನು ರಂಜಿಸುವ ಶಕ್ತಿ ಇದೆ. ಇಂತಹ ಕಲಾವಿದರು ಇಂದು ಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಆದ್ದರಿಂದ ಸರ್ಕಾರ ಮತ್ತು ಸಾರ್ವಜನಿಕರು ನಾಟಕಗಳ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುವುದರ ಮೂಲಕ ಇಂತಹ ಕಲಾವಿದರ ಕೈ ಹಿಡಿದು ಮೇಲೆತ್ತುವ ಕೆಲಸ ಆಗಬೇಕಾಗಿದೆ ಎಂದು ಹೇಳಿದರು.

ಖಾದರ್ ಪಿ. ಮತ್ತು ಸಂಗಡಿಗರು ಅಭಿನಯಿಸಿದ ಕಿವುಡ ಮಾಡಿದ ಕಿತಾಪತಿ ಎಂಬ ನಾಟಕವನ್ನು ಜನ ನೋಡಿ ಸಂತೋಷಗೊಂಡರು.

ಈ ಸಂದರ್ಭದಲ್ಲಿ ಟಿ. ಹನುಮಂತಪ್ಪ, ಬಿ ತಿಮ್ಮಣ್ಣ, ಜಿ. ಪರಮೇಶ್ವರಪ್ಪ, ರವೀಂದ್ರ ಸ್ವಾಮಿ, ಮಂಡ್ಲೂರು ಬಸವರಾಜಪ್ಪ, ಶಶಿಧರ್ ಬಸಾಪುರ ಮತ್ತಿತರರು ಭಾಗವಹಿಸಿದ್ದರು. ಬಿ.ರತ್ನ ಪ್ರಾರ್ಥಿಸಿದರು. ಸಂಘದ ಅಧ್ಯಕ್ಷರಾದ ಎನ್.ಎಸ್. ರಾಜು ಸ್ವಾಗತಿಸಿದರು. ಮಮತಾ ಸಿ. ಕಾರ್ಯಕ್ರಮ ನಿರೂಪಿಸಿದರು.

## ನಗರದಲ್ಲಿ ಇಂದು ನೂಪುರ ನೃತ್ಯೋತ್ಸವ

ದಾವಣಗೆರೆ, ಡಿ.6- ನಗರದ ನೂಪುರ ಕಲಾ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಾಳೆ ದಿನಾಂಕ 7 ರ ಶನಿವಾರ ಸಂಜೆ 6 ಕ್ಕೆ ನಗರದ ಬಂಟರ ಭವನದಲ್ಲಿ ನೂಪುರ ನೃತ್ಯೋತ್ಸವ- 2024 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆ ಸಂಸ್ಥಾಪಕರಾದ ಬೃಂದಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಪ್ರಾಧ್ಯಾಪಕ ಕೆ.ಎಸ್.ಶ್ರೀಧರ್, ವಾಸವಿ ಮಹಿಳಾ ಸಂಘದ ಗೌರವಾಧ್ಯಕ್ಷೆ ಹೇಮಾ ಶ್ರೀನಿವಾಸ್ ಆಗಮಿಸಲಿದ್ದಾರೆ. ಇದೇ ವೇಳೆ ವಿದುಷಿ ಪದ್ಮಿನಿ ಉಪಾಧ್ಯ, ಬಿ. ವಿಜಯಲಕ್ಷ್ಮಿ, ವಿದುಷಿ ಅಂಬಳೆ ರಾಜೇಶ್ವರಿ ಅವರನ್ನು ಗೌರವಿಸಲಾಗುವುದು ಎಂದು ಹೇಳಿದರು.

ಈ ಬಾರಿ ಚಿನ್ಮಯ ಕೃಷ್ಣನ ವಿಷಯ ಆಯ್ಕೆ ಮಾಡಿಕೊಂಡಿದ್ದು, ಈ ಸಂಬಂಧ ಒಂದು ಗಂಟೆ ಮೂವತ್ತು ನಿಮಿಷ ಅವಧಿಯದ್ದಾಗಿದ್ದು, ಐವತ್ತು ಮಕ್ಕಳು ನೃತ್ಯ ರೂಪಕದಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ವಿಜಯದುರ್ಗ, ಕೆ.ಎಂ. ನಾಗವೇಣಿ, ಸಿರಿ, ಪವಿತ್ರಾ ರಾಯ್ಕರ್, ನವ್ಯ ರಾಯ್ಕರ್ ಉಪಸ್ಥಿತರಿದ್ದರು.

# ಒಂಟಿ ಮಹಿಳೆಯರಿಗೆ ರೇಷನ್ ಕಾರ್ಡ್ ನೀಡಲು ಆಗ್ರಹ



ದಾವಣಗೆರೆ, ಡಿ.6- ಪತಿಯಿಂದ ದೂರವಾಗಿರುವ, ವಿಧವೆ ಹಾಗೂ ವಿವಾಹವಾಗದೇ ಪ್ರತ್ಯೇಕವಾಗಿ ವಾಸ ಮಾಡುತ್ತಿರುವ ಒಂಟಿ ಮಹಿಳೆಯರಿಗೆ ವಿಶೇಷವಾಗಿ ಪ್ರತ್ಯೇಕ ರೇಷನ್ ಕಾರ್ಡ್ ನೀಡುವಂತೆ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ (ಗ್ರಾಕೂಸ್) ಒತ್ತಾಯಿಸಿದೆ.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ, ಅಪರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಹಾಗೂ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ರಾಗಿ, ಜೋಳ, ತೊಗರಿ ಬೇಳೆ, ಎಣ್ಣೆಯನ್ನು ನ್ಯಾಯ ಬೆಲೆ ಅಂಗಡಿ ಮೂಲಕ ವಿತರಿಸಬೇಕು. ನಿಜವಾದ ಬಡವರಿಗೆ ತಕ್ಷಣ ಕಾರ್ಡ್ ವಿತರಿಸಬೇಕು ಎಂದು ಒತ್ತಾಯಿಸಲಾಯಿತು.

ಉದ್ಯೋಗ ಖಾತ್ರಿ ಕಾರ್ಮಿಕರಿಗೆ ಬಜೆಟ್‌ನಲ್ಲಿ ಮೀಸಲಿಡಬೇಕಾದ ಹಣವನ್ನು ಕೇಂದ್ರ ಸರ್ಕಾರ ಪ್ರತಿ ವರ್ಷ ಕಡಿಮೆ ಮಾಡುತ್ತಾ ಬಂದಿರುವುದು ಸರಿಯಲ್ಲ. ಈ ಬಾರಿ ಬಜೆಟ್‌ನಲ್ಲಿ 2 ಲಕ್ಷ ಕೋಟಿ ಹಣ ಮೀಸಲಿಡಬೇಕು. ಬಾಕಿ ಇರುವ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಲಾಯಿತು.

ಒಂದು ಕುಟುಂಬಕ್ಕೆ 200 ದಿನಗಳ ಕೆಲಸ ಖಾತ್ರಿಗೊಳಿಸಬೇಕು. ಕನಿಷ್ಠ ವೇತನ 600 ರೂ. ನೀಡಬೇಕು. ಕಾರ್ಮಿಕರು ಕೆಲಸ ಮಾಡುವ ವೇಳೆ ಮರಣ ಹೊಂದಿದರೆ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ನಾಗರತ್ನ, ಕೆ.ಶಶಿಕಲಾ, ದುರುಗಮ್ಮ, ಸುಧಾ ಪಿ.ಎಸ್., ಮಂಜುಳಮ್ಮ, ಪರಶುರಾಮಪ್ಪ, ನಾಗರಾಜ್, ಹನುಮಂತಪ್ಪ, ರಾಜು ಇತರರು ಇದ್ದರು.

# ಬುದ್ಧ, ಬಸವ, ಅಂಬೇಡ್ಕರ್ ವಿಚಾರಧಾರೆ ಮೈಗೂಡಿಸಿಕೊಳ್ಳಿ



ಜಗಳೂರಿನ ಕಾರ್ಯಕ್ರಮದಲ್ಲಿ ಯುವ ಪೀಳಿಗೆ ಶಾಸಕ ಬಿ.ದೇವೇಂದ್ರಪ್ಪ ಕರೆ

ಜಗಳೂರ, ಡಿ.6- ಇಂದಿನ ಯುವಪೀಳಿಗೆ ಬುದ್ಧ, ಬಸವ, ಅಂಬೇಡ್ಕರ್ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು, ಸಮಾಜದಲ್ಲಿ ಜಾಗೃತಿ ಮೂಡಿಸುವ ಅನಿವಾರ್ಯತೆಯಿದೆ ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಡಿಎಸ್‌ಎಸ್ ಹಾಗೂ ಮಾನವ ಬಂಧುತ್ವ ವೇದಿಕೆ, ಪ್ರಗತಿ ಪರ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂಬೇಡ್ಕರ್ ಅವರ 68 ನೇ ಪರಿನಿರ್ವಾಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮನುವಾದಕ್ಕೆ ಅಂತ್ಯವಾಡಿದ ಸಂವಿಧಾನದ ಕರ್ತೃ ಡಾ.ಬಿ.ಆರ್ ಅಂಬೇಡ್ಕರ್ ಅವರ ಆಶಯಗಳು ಸಾರ್ವಕಾಲಕ್ಕೂ ಜೀವಂತ. ಅಂಬೇಡ್ಕರ್ ಅವರ ದೇಹ ದೂರವಾದರೂ ಜ್ಞಾನ ಭಂಡಾರ ನಮಗೆ ಆದರ್ಶವಾಗಿದೆ ಎಂದರು.

ಸಚಿವ ಸತೀಶ್ ಜಾರಕಿಹೊಳಿ ಅವರ ನೇತೃತ್ವದ ಮಾನವ ಬಂಧುತ್ವ ವೇದಿಕೆ ಯಡಿಯಲ್ಲಿ ಮೂಢನಂಬಿಕೆ, ಕಂದಾಚಾರಗಳನ್ನು ಹೋಗಲಾಡಿಸಲು ತಾಲೂಕಿನಲ್ಲಿ ಜನಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಭರವಸೆ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಕೆ.ಪಿ.ಪಾಲಯ್ಯ ಮಾತನಾಡಿ, ಅಂಬೇಡ್ಕರ್ ಅವರ ಪರಿನಿರ್ವಾಣ ಕಾರ್ಯಕ್ರಮದ ಅಂಗವಾಗಿ ಸಚಿವ ಸತೀಶ್ ಜಾರಕಿಹೊಳಿ ಅವರ ನೇತೃತ್ವದ ಸ್ಮಶಾನ ವಾಸ್ತವ್ಯ ಕಾರ್ಯಕ್ರಮಗಳು ಅಂಬೇಡ್ಕರ್ ವಿಚಾರಧಾರೆಗಳನ್ನು ಸಮಾಜಕ್ಕೆ ಪರಿಚಯಿಸುವ ಮೂಲಕ ಸಂವಿಧಾನದ ಆಶಯಗಳನ್ನು ಸಕಾರಗೊಳಿಸಲಾಗುತ್ತಿವೆ. ಮನುವಾದಿಗಳು ಸರ್ಕಾರಿ ಸ್ವಾಮ್ಯದ ಇಲಾಖೆಗಳನ್ನು ಖಾಸಗೀರಣಗೊಳಿಸುವ ಮೂಲಕ ಸಂವಿಧಾನ ಬದ್ಧ ಮೀಸಲಾತಿಗೆ ಕೊಡಲಿ ಪೆಟ್ಟು ತರುವುದು ಆತಂಕಕಾರಿ ಬೆಳವಣಿಗೆ ಎಂದು ಕಳವಳ ವ್ಯಕ್ತಪಡಿಸಿದರು.

ವಕೀಲ ಸಂಘದ ತಾಲೂಕು ಘಟಕದ ಅಧ್ಯಕ್ಷ ಟಿ. ಬಸವರಾಜ್ ಮಾತನಾಡಿ, ರಾಜಪ್ರಭುತ್ವ ವ್ಯವಸ್ಥೆಯಲ್ಲಿ ಬಂಡವಾಳ ಶಾಹಿಗಳಿಗೆ ಸೀಮಿತವಾಗಿದ್ದ ಮತದಾನದ ಹಕ್ಕನ್ನು ಸಾರ್ವತ್ರೀಕರಣಗೊಳಿಸಿದ ಅಂಬೇಡ್ಕರ್ ಸಂವಿಧಾನವನ್ನು ವಿರೋಧಿಸುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳ ಮನಸ್ಥಿತಿ ಬದಲಾಗಬೇಕು ಎಂದರು.

ಡಿಎಸ್‌ಎಸ್ ಮುಖಂಡ ಜಿ.ಎಸ್.ಶಂಭುಲಿಂಗಪ್ಪ ಮಾತನಾಡಿ, ಅಸ್ಪೃಶ್ಯತೆ ವಿಜೃಂಭಣೆ ಅನುಭವಿಸಿ ಸಂವಿಧಾನ ರಚಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಿ ಶೋಷಿತ ವರ್ಗಕ್ಕೆ ಬೆಳಕಾಗಿದ್ದಾರೆ. ಆದರೆ ಇಂದಿಗೂ ಕೆಲ ರಾಜಕೀಯ ಹಿತಾಸಕ್ತಿಯಿಂದ ಜಾತಿ ವ್ಯವಸ್ಥೆ ತಾಂಡವಾಡುತ್ತಿರುವುದು ಶೋಚನೀಯ ಸ್ಥಿತಿ ಎಂದು ವಿಷಾದಿಸಿದರು.

ಈ ಸಂದರ್ಭದಲ್ಲಿ ಪ.ಪಂ.ಅಧ್ಯಕ್ಷ ನವೀನ್ ಕುಮಾರ್, ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ,ತಾ.ಪಂ. ಇಓ ಕೆಂಚಪ್ಪ, ಪ.ಪಂ.ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಪಿಐ ಶ್ರೀನಿವಾಸ್ ರಾವ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಪರಮೇಶ್ವರಪ್ಪ, ಸಿಡಿಪಿಓ ಬೀರೇಂದ್ರಕುಮಾರ್, ತಾಲೂಕು ನಾಯಕ ಸಮಾಜದ ಕಾರ್ಯದರ್ಶಿ ವಕೀಲ ತಿಪ್ಪೇಸ್ವಾಮಿ, ಮುಖಂಡರಾದ ಬಿ.ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಕುಬೇಂದ್ರಪ್ಪ, ರಂಗಪ್ಪ, ಸತೀಶ್ ಮಲೆಮಾಚಿಕೆರೆ, ಧನ್ಯಕುಮಾರ್, ಚಂದ್ರಪ್ಪ, ಹನುಮಂತಾಪುರ ಸತೀಶ್, ಸತ್ಯಮೂರ್ತಿ, ಓಬಣ್ಣ ಸೇರಿದಂತೆ ಇತರರು ಇದ್ದರು.


**WANTED**

**Civil Engineer no - 2**

*Working place :*

**Hassan , Mandya**

**3 years experience preferred**

**Ph : 91645 57575 , 93808 78755**


**ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ.**

**ಪಿ ಅಂಡ್ ಎಸ್.ಸಿ. ಸಂಖ್ಯೆ 49/2024**

**ಅರ್ಜಿದಾರರು : ಶ್ರೀ ಬಿ.ಎಸ್. ಸೋಮನಾಥ್ ತಂದೆ ಸಣ್ಣಪ್ಪ ಶೆಟ್ಟಿ, ವಯಸ್ಸು ಸುಮಾರು 57 ವರ್ಷ, ವಿಳಾಸ : #58, ಮುಖ್ಯರಸ್ತೆ, ಗುರುಸಿದ್ದಾಪುರ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.**

**ವಿರುದ್ಧ-/ ಎದುರುದಾರರು : ಇಲ್ಲ**

**ಸಾರ್ವಜನಿಕ ನೋಟೀಸ್**

ಈ ಮೇಲ್ಕಂಡ ಅರ್ಜಿಯನ್ನು ಅರ್ಜಿದಾರರು ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳಿಗೆ ಅರ್ಜಿದಾರರ ತಂದೆ ವೈ. ಸಣ್ಣಪ್ಪ ಶೆಟ್ಟರವರು ದಿನಾಂಕ : 11.10.2018 ರಂದು ಮರಣ ಶಾಸನವನ್ನು ಅರ್ಜಿದಾರರಾದ ಬಿ.ಎಸ್. ಸೋಮನಾಥ್‌ರವರ ಹೆಸರಿಗೆ ಬರೆದಿರುತ್ತಾರೆ. ಸದರಿ ವಿಲ್ಲನ್ನು ಪ್ರೊಬೇಟ್ ಕೋರಿ ಭಾರತೀಯ ಉತ್ತರಾಧಿಕಾರ ಅಧಿನಿಯಮ ಕಲಂ 276 ರಡಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಸಣ್ಣಪ್ಪ ಶೆಟ್ಟಿ ತಂದೆ ರಾಮಶೆಟ್ಟಿ ರವರು ದಿನಾಂಕ : 05.08.2024ರಂದು ಮರಣ ಹೊಂದಿರುತ್ತಾರೆ.

ಈ ಬಗ್ಗೆ ಯಾರದೇ ಆಗಲೀ ಯಾವುದೇ ತಂಟೆ ತಕರಾರು ಇದ್ದಲ್ಲಿ ಖುದ್ದಾಗಿ ಆಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ದಿನಾಂಕ : 08.01.2025 ರಂದು ಬೆಳಗ್ಗೆ 11.00 ಗಂಟೆಗೆ ಸರಿಯಾಗಿ ಈ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೇಲ್ಕಂಡ ಅರ್ಜಿಯನ್ನು ಯಾರದೂ ತಕರಾರು ಇಲ್ಲವೆಂದು ಪರಿಗಣಿಸಿ, ಅರ್ಜಿಯನ್ನು ಅರ್ಹತೆಯ ಆಧಾರದ ಮೇಲೆ ವಿಲೇವಾರಿ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ : 04.12.2024 ರಂದು ನೀಡಲಾಗಿದೆ.

**ಷೆಡ್ಯೂಲ್ "ಎ"** - ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಗುರುಸಿದ್ದಾಪುರ ಗ್ರಾಮದ ರಿ.ಸ.ನಂ. 7/18/ಬಿ4 ವಿಸ್ತೀರ್ಣ 0.14.08 ಗುಂಟೆ ಇದರ ಚೆಕ್ಕುಬಂದಿ : ಪೂರ್ವ : ಪಂಚಾಯಿತಿ ರಸ್ತೆ, ಪಶ್ಚಿಮ:ಮಂಜಣ್ಣನ ಖಣ, ಉತ್ತರ : ಪಂಚಾಯಿತಿ ರಸ್ತೆ, ದಕ್ಷಿಣ : ಗೋವಿಂದಪ್ಪನ ಖಣ.

**ಷೆಡ್ಯೂಲ್ "ಬಿ"** - ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಗುರುಸಿದ್ದಾಪುರ ಗ್ರಾಮದ ಮನೆ #280, ಆಸ್ತಿ ನಂ. 67/ಪಿ3 ವಿಸ್ತೀರ್ಣ ಮೀಟರ್‌ನಲ್ಲಿ ಪೂ-ಪ 7.31, ಉ-ದ 15.84 ಇದರ ಚೆಕ್ಕು ಬಂದಿ : ಪೂರ್ವ : ಪಂಪಣ್ಣ ಶೆಟ್ಟಿ ಮನೆ, ಪಶ್ಚಿಮ : ಪಂಪಣ್ಣ ಶೆಟ್ಟಿ ಮನೆ, ಉತ್ತರ : ಪಂಚಾಯ್ತಿ ರಸ್ತೆ, ದಕ್ಷಿಣ : ಪಂಚಾಯಿತಿ ರಸ್ತೆ.

**ಷೆಡ್ಯೂಲ್ "ಸಿ"** - ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಗುರುಸಿದ್ದಾಪುರ ಗ್ರಾಮದ ರಿ.ಸ.ನಂ. 8/9 ವಿಸ್ತೀರ್ಣ 3.27 ಗುಂಟೆ ಇದರ ಚೆಕ್ಕು ಬಂದಿ : ಪೂರ್ವ ಮರಿಯಪ್ಪನ ಜಮೀನು, ಪಶ್ಚಿಮ : ಶ್ರೀಧರ ಶೆಟ್ಟಿಯವರ ಜಮೀನು, ಉತ್ತರ : ನೀಲಪ್ಪ ಮತ್ತು ಸಿದ್ದಪ್ಪನ ಖಣ, ದಕ್ಷಿಣ : ರಸ್ತೆ.

**ಷೆಡ್ಯೂಲ್ "ಡಿ"** - ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಗುರುಸಿದ್ದಾಪುರ ಗ್ರಾಮದ ರಿ.ಸ.ನಂ. ಹಳೆ ನಂ. 8/7 ಹೊಸ ನಂ. 8/13 ವಿಸ್ತೀರ್ಣ 10 ಗುಂಟೆ ಇದರ ಚೆಕ್ ಬಂದಿ : ಪೂರ್ವ: ಶ್ರೀಧರ ಶೆಟ್ಟಿ ಖಣ, ಪಶ್ಚಿಮ : ಪಂಚಾಯಿತಿ ರಸ್ತೆ, ಉತ್ತರ : ಬಸವರಾಜಪ್ಪನ ಖಣ, ದಕ್ಷಿಣ : ರಸ್ತೆ.

**ಷೆಡ್ಯೂಲ್ "ಇ"** - ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಗುರುಸಿದ್ದಾಪುರ ಗ್ರಾಮದ ರಿ.ಸ.ನಂ. 7/18/1ಬಿ ವಿಸ್ತೀರ್ಣ 0.14.08 ಗುಂಟೆ ಇದರ ಚೆಕ್ಕು ಬಂದಿ : ಪೂರ್ವ : ಪಂಚಾಯಿತಿ ರಸ್ತೆ, ಪಶ್ಚಿಮ : ಜಯಲಕ್ಷ್ಮಿ ರವರ ಖಣ. ಉತ್ತರ : ಸುದೀರ್ ಶೆಟ್ಟಿ ಖಣ, ದಕ್ಷಿಣ : ರಸ್ತೆ.

**ಸಹಿ/- ವಾದಿ ಪರ ವಕೀಲರು**
**(ಶ್ರೀಧರ ಟಿ.ಎಂ.)**
**ದಿನಾಂಕ : 4.12.2024 ದಾವಣಗೆರೆ.**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಮುಖ್ಯ ಆಡಾಳಿತಾಧಿಕಾರಿಗಳು**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.**

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.**

**ನಿಯಮ 8(1) ಪರಿಶಿಷ್ಟ 4**

**ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್**

**(ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ)**

ಸೆಕ್ಯೂರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆ 2002ರ ಅನ್ವಯ ಕೆಳ ಸಹಿದಾರರು ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ. ದಾವಣಗೆರೆ ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002 ನಿಯಮ-3 ಮತ್ತು 9 ಓದಿಕೊಂಡಂತೆ ಕಲಂ 13(12) ರನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಸಾಲಗಾರರಿಗೆ ಸಾಲವನ್ನು ಮರುಪಾವತಿಸಲು ದಿನಾಂಕ 19.07.2024 ರಂದು ತಗಾದೆ ನೋಟೀಸುಗಳನ್ನು ನೀಡಲಾಗಿತ್ತು. ಸದರಿ ಸೂಚನೆಗಳು ತಲುಪಿದ ದಿನಾಂಕದಿಂದ 60 ದಿವಸದೊಳಗೆ ಸೂಚನೆಯಲ್ಲಿ ಸೂಚಿಸಿರುವ ಮೊಬಲಗನ್ನು ಮರುಪಾವತಿ ಮಾಡಬೇಕಿತ್ತು. ಸಾಲಗಾರರು ಸಾಲದ ಮೊಬಲಗನ್ನು ಮರುಪಾವತಿ ಮಾಡಲಿಲ್ಲವಾದ್ದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ನಿಯಮದ ನಿಯಮ 8 ಮತ್ತು 9 ನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ13(4) ರನ್ವಯ ಪ್ರದತ್ತವಾಗಿರುವ ಆಧಿಕಾರವನ್ನು ಚಲಾಯಿಸಿ ದಿನಾಂಕ 02.12.2024ರಂದು ಈ ಕೆಳಕಂಡ ಸೊತ್ತುಗಳನ್ನು ಕೆಳ ಸಹಿದಾರರು ಸಾಂಕೇತಿಕವಾಗಿ ವಶಪಡಿಸಿಕೊಂಡಿರುತ್ತೇವೆ. ನಿರ್ದಿಷ್ಟವಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ನಡೆದಿದ್ದೇ ಆದರೆ ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ., ದಾವಣಗೆರೆ ಇದರ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಹಾಗೂ ಇತರೆ ಖರ್ಚುಗಳನ್ನು ಚುಕ್ತಾ ಮಾಡುವುದಕ್ಕೆ ಒಳಪಟ್ಟಿರುತ್ತದೆ.

**ಸಾಲಗಾರರ ಹೆಸರು ಮತ್ತು ವಿಳಾಸ :** 1) **ಶ್ರೀ ಗೌಸ್ ಪೀರ್ ಮತ್ತು ಶ್ರೀಮತಿ ಜಾಸ್ಮಿನ್ ಬಾನು,** #708, ಎರಡನೇ ಮೇನ್, ಹದಿನಾಲ್ಕನೇ ಕ್ರಾಸ್, ಜಯದೇವ ಸರ್ಕಲ್, ಕೆ.ಟಿ.ಜೆ. ನಗರ, ದಾವಣಗೆರೆ. **2) ಸಾಲದ ಖಾತೆ :** ಕಟ್ಟಡ ಅಡವು ಸಾಲ (ಎಮ್ ಎಲ್) ನಂ. 198 ಬರಬೇಕಾದ ಸಾಲದ ಬಾಕಿ ಅಸಲು ರೂ. 3,38,986=00 ಬಡ್ಡಿ ರೂ. 0=00(30.11.2024ರವರೆಗೆ)+ ಈ ತಹಲ್‌ವರೆಗೆ + ಇತರೇ ಖರ್ಚು

**ಜಾಮೀನುದಾರರುಗಳ ಹೆಸರು : 1. ಶ್ರೀ. ಎಂ.ಬಿ. ಗಿರೀಶ್ ಬಿನ್ ಬಸವರಾಜಪ್ಪ,** ಡೋರ್ ನಂ.358, 17ನೇ ಕ್ರಾಸ್, ಕೆ.ಟಿ.ಜೆ. ನಗರ, ದಾವಣಗೆರೆ. **2. ಶ್ರೀ ಇಮಾಮ್ ಹುಸೇನ್ ಬಿನ್ ಮೆಹಬೂಬ್ ಸಾಬ್,** 2ನೇ ಮೇನ್ 14ನೇ ಕ್ರಾಸ್,ಕೆ.ಟಿ.ಜೆ. ನಗರ, ದಾವಣಗೆರೆ.

**ಬ್ಯಾಂಕಿಗೆ ಆಧಾರವಾದ ಸ್ಥಿರಾಸ್ತಿಗಳ ವಿವರ :** ದಾವಣಗೆರೆ ತಾಲ್ಲೂಕು ಹಿರಿಯ ಉಪನೋಂದಣಾಧಿಕಾರಿಗಳ ಕಛೇರಿಗೆ ಒಳಪಟ್ಟ, ದಾವಣಗೆರೆ ಸಿಟಿ, 5ನೇ ವಾರ್ಡು, 8ನೇ ಡಿವಿಜನ್, ಕೆ.ಟಿ.ಜೆ. ನಗರ, 2ನೇ ಮೇನ್, 14ನೇ ಕ್ರಾಸ್‌ನಲ್ಲಿ ಬರುವ ಮುನ್ಸಿಪಲ್ ಡೋರ್ ನಂ. 704/1,2,3 ಅಳತೆ 30 X 40 ಅಡಿ ಪೈಕಿ ಪಶ್ಚಿಮಾರ್ಧ ಭಾಗದ ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂಬರ್ 704/1,2 ಇದರ ಅಳತೆ 15 X 40 ಅಡಿ ಪೈಕಿ ಪೂರ್ವಭಾಗದ ಅಳತೆ 13.50 X 40 ಅಡಿ ಉಳ್ಳ ಜಾಗ ಸದರಿ ಜಾಗದಲ್ಲಿ ಕಟ್ಟಿರುವ ಗೌಂಡ್ ಫ್ಲೋರ್‌ನಲ್ಲಿರುವ 540 ಚದರಡಿ ಆರ್ ಸಿ ಸಿ ರೂಫಿಂಗ್ ಇದ್ದು, ಫಸ್ಟ್ ಫ್ಲೋರ್‌ನಲ್ಲಿ 540 ಚದರಡಿ ಎ ಸಿ ಸೀಟು ಹೊದಿಕೆ ಇರುವ ಮನೆಯ ಪಶ್ಚಿಮ ದಿಕ್ಕಿನ ಕಡೆಯ 1.50 ಅಡಿ ಜಾಗದಲ್ಲಿ ಸ್ಟೇರ್‌ಕೇಸ್ ನಲ್ಲಿ ಕಾಮನ್ ಹಕ್ಕು ಇರುವ ಪೂರಾ ಸೊತ್ತಿಗೆ ಚೆಕ್ಕುಬಂದಿ ಈ ಕೆಳಗಿನಂತಿದೆ.

**ಇದರ ಚೆಕ್ಕುಬಂದಿ ಈ ಕೆಳಗಿನಂತಿದೆ :** ಪೂರ್ವಕ್ಕೆ : ಇದೇ ನಂಬರ್ ಪೈಕಿ ಉಳಿದ ಸೊತ್ತು, ಪಶ್ಚಿಮಕ್ಕೆ : ಡೋರ್ ನಂ.703ನೇ ಆಶಾಬೀ ಯಾನೇ ಮಹಬೂಬ್‌ಬೀ ಇವರ ಬಾಬ್ತು, ಉತ್ತರಕ್ಕೆ : ಕನ್ಸರ್‌ವೆನ್ಸಿ, ದಕ್ಷಿಣಕ್ಕೆ : ರೋಡ್

ದಿನಾಂಕ : 02.12.2024
ಸ್ಥಳ : ದಾವಣಗೆರೆ

ಸಹಿ/- **(ಎನ್. ತುಳಸಿನಾಥ),**
ಅಧಿಕೃತ ಅಧಿಕಾರಿ ಹಾಗೂ ಪ್ರಧಾನ ವ್ಯವಸ್ಥಾಪಕರು
ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.

## ಕೈಗೂಡಿದ ದಶಕಗಳ ಕನಸು: ಸಮುದಾಯ ಭವನಕ್ಕೆ ಅಡಿಪಾಯ

# ಅಭಿವೃದ್ಧಿಯತ್ತ ಆನಗೋಡಿನ ರೈತ ಹುತಾತ್ಮರ ಸ್ಮಾರಕ






**ಜಿ. ಜಗದೀಶ್ ಮಾಯಕೊಂಡ**

ಸತತ ಮೂರು ದಶಕಗಳಿಂದ ಕಾಯಕಲ್ಪಕ್ಕೆ ಕಾದಿದ್ದ, ಆನಗೋಡಿನ ರೈತ ಹುತಾತ್ಮರ ಸ್ಮಾರಕಕ್ಕೆ ಅಭಿವೃದ್ಧಿಯ ಅಭಯ ಹಸ್ತ ಸಿಕ್ಕಿದೆ. ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಸರ್ಕಾರದಿಂದ ರೂ. 40 ಲಕ್ಷ ಅನುದಾನ ಬಿಡುಗಡೆ ಮಾಡಿಸಿ, ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದಾರೆ.

1992ರಲ್ಲಿ ರಸಗೊಬ್ಬರ ಬೆಲೆ ಏರಿಕೆ ಖಂಡಿಸಿ ಚಳವಳಿ ನಡೆಸಿ, ಪೊಲೀಸ್ ಗೋಲಿಬಾರ್‌ಗೆ ಎದೆಕೊಟ್ಟು ಹುತಾತ್ಮರಾದ ಸಿದ್ದನೂರು ನಾಗರಾಜಚಾರ್, ಓಬೇನಹಳ್ಳಿ ಕಲ್ಲಿಂಗಪ್ಪ ಸಮಾಧಿ ಇನ್ನು ಮುಂದೆ ಹುತಾತ್ಮರ ಸ್ಮಾರಕವಾಗಿ, ಜಿಲ್ಲೆಯ ರೈತ ಹೋರಾಟದ ಸಾಕ್ಷಿಪ್ರಜ್ಞೆಯಾಗಬೇಕು ಎಂಬುದು ರೈತ ಹೋರಾಟಗಾರರ ಆಶಯ.

**ಹೋರಾಟದ ಹಾದಿಯ ಕಹಿ ನೆನಪು:** ಪಿ.ವಿ. ನರಸಿಂಹರಾವ್ ಸರ್ಕಾರ ರಸಗೊಬ್ಬರ ಬೆಲೆ ಏರಿಸಿದ್ದರ ವಿರುದ್ಧ ರೈತ ಸಂಘಟನೆಗಳು ಉಗ್ರ ಪ್ರತಿಭಟನೆಗೆ ಮುಂದಾದವು. ಆನಗೋಡು ಬಳಿ ಕೆಲವು ದಿನ ರಾಷ್ಟ್ರೀಯ ಹೆದ್ದಾರಿ ತಡೆದು, ಟೈರ್‌ಗೆ ಬೆಂಕಿಯಿಟ್ಟು ಸರ್ಕಾರಕ್ಕೇ ನಡುಕ ಹುಟ್ಟಿಸಿದ್ದರು. ಉದ್ರಿಕ್ತರನ್ನು ಚದುರಿಸಲು ಪೊಲೀಸರು ನಡೆಸಿದ ಗೋಲಿಬಾರ್‌ನಿಂದ ಸಿದ್ದನೂರು ನಾಗಲಿಂಗಾಚಾರ್ ಮತ್ತು ಓಬಣ್ಣನಹಳ್ಳಿ ಕಲ್ಲಿಂಗಪ್ಪ ಮೃತಪಟ್ಟಿದ್ದರು. ಮೃತರನ್ನು ಆನಗೋಡು ಹೆದ್ದಾರಿ ಮತ್ತು ಹೊಸದುರ್ಗಕ್ಕೆ ತೆರಳುವ ರಾಜ್ಯ ಹೆದ್ದಾರಿ ಪಕ್ಕದಲ್ಲಿ ಸಮಾಧಿ ಮಾಡಲಾಗಿತ್ತು. ಸಮಾಧಿ ಹೆದ್ದಾರಿ ವಿಸ್ತರಣೆಯಿಂದಾಗಿ ಸ್ಥಳಾಂತರವಾಯಿತು.

1992 ರಿಂದ ಇಲ್ಲಿಯವರೆಗೂ ಎನ್.ಜಿ. ಪುಟ್ಟಸ್ವಾಮಿ ನೇತೃತ್ವದಲ್ಲಿ ಎಲ್ಲಾ ರೈತ ಸಂಘಟನೆಗಳು ಸ್ವಂತ ಖರ್ಚಿನಲ್ಲಿ ರೈತ ಹುತಾತ್ಮರ ದಿನಾಚರಣೆ ಆಚರಿಸಿಕೊಂಡು ಬರುತ್ತಿದ್ದೇವೆ ಎಂದು ರೈತ ಒಕ್ಕೂಟದ ಮುಖಂಡರಾದ ಹೆಚ್. ನಂಜುಂಡಪ್ಪ, ಹೊನ್ನೂರು ಮುನಿಯಪ್ಪ, ಕಕ್ಕರಗೊಳ್ಳ ಕಲ್ಲಿಂಗಪ್ಪ, ಆವರಗೆರೆ ರುದ್ರಮುನಿ, ಶಾಮನೂರು ಹೆಚ್.ಆರ್. ಲಿಂಗರಾಜ್, ಷಣ್ಮುಖಯ್ಯ, ಶೇಖರನಾಯ್ಕ, ಬುಳ್ಳಾಪುರ ಹನುಮಂತಪ್ಪ ಮತ್ತಿತರರು ಸ್ಮರಿಸುತ್ತಾರೆ.

ಹೆದ್ದಾರಿ ಅಗಲೀಕರಣದಿಂದ ಹುತಾತ್ಮರ ಸಮಾಧಿ ಸ್ಥಳಾಂತರಿಸಲಾಯಿತು. ಹೆದ್ದಾರಿಗೆ ಹೊಂದಿಕೊಂಡ ಪ್ರಿಯದರ್ಶಿನಿ ಉದ್ಯಾನದ ಪಕ್ಕದಲ್ಲಿ ಸುಮಾರು 1 ಎಕರೆ ಜಮೀನಿನಲ್ಲಿ ಹುತಾತ್ಮರ ಸಮಾಧಿ ಮರುನಿರ್ಮಾಣ ಮಾಡಲಾಗಿದೆ. ಸ್ಮಾರಕದ ಬಳಿ ರೈತರಿಗೆ ವಸತಿ ಭವನ ಅಧ್ಯಯನ ಕೇಂದ್ರ, ಸಂಶೋಧನಾ ಕೇಂದ್ರ, ಮ್ಯೂಸಿಯಂ ನಿರ್ಮಾಣ ಮಾಡಿ ಇದನ್ನು ರಾಷ್ಟ್ರೀಯ ಸ್ಮಾರಕ ಮಾಡಬೇಕು ಎಂಬುದು ರೈತ ಒಕ್ಕೂಟಗಳ ಒತ್ತಾಸೆ.

# ಬಿತ್ತನೆ, ನಾಟಿ ವೇಳೆ ಮುನ್ನಚ್ಚರಿಕೆ ಕ್ರಮ ಅಗತ್ಯ



**ರೈತರಿಗೆ ಸಲಹೆ**

ದಾವಣಗೆರೆ,ಡಿ.6- ಕೃಷಿ ಬೆಳೆಗಳ ನಿರ್ವಹಣೆ ಕುರಿತು ನಗರದ ವರದಾ ಕೃಷಿಕರ ವೇದಿಕೆ ರೈತರಿಗೆ ಕೆಲವು ಮುನ್ನೆಚ್ಚರಿಕೆ ಕ್ರಮಗಳ ಕುರಿತಂತೆ ಮಾಹಿತಿ ನೀಡಿದೆ.

ಕೊಟ್ಟಿಗೆ/ ಸಾವಯವ ಗೊಬ್ಬರ ಬಳಸಿಲ್ಲವೇ, ಬೀಜೋಪಚಾರ ಮಾಡುತ್ತಿಲ್ಲವೇ, ತಲೆ ಸಾಲಾಗಿ ಗೋವಿನಜೋಳ ಬೆಳೆಯುತ್ತಿಲ್ಲವೇ, ರಸ ಹೀರುವ ಕೀಟಗಳ ಸಮಗ್ರ ಹತೋಟಿಗೆ (ಬೀಜೋಪಚಾರ, ಕೊತಂಬರಿ ಬೆರೆಸಿ ಬಿತ್ತನೆ, ಅಂಟು ಬಲೆ ಬಳಕೆ, ಜೈವಿಕ ಪೀಡೆನಾಶಕ ಬಳಕೆ, ಅತಿ ರೋಗ ಬಾಧಿತ ಸಸ್ಯಗಳ ನಿರ್ಮೂಲನೆ) ಕ್ರಮ ಕೈಗೊಂಡಿಲ್ಲವೇ ? ಶೇಂಗಾ, ಸೂರ್ಯಕಾಂತಿ, ಹೆಸರು, ಉದ್ದು, ಅಲಸಂದೆ, ಕಬ್ಬು, ಮೆಣಸಿನಗಿಡ ಬೆಳೆಗಳ ಬಿತ್ತನೆ/ ನಾಟಿ ಮಾಡಬೇಡಿ.

ಇನ್ನು ಮುಂದೆ ಶೇಂಗಾ, ಸೋಯಾ ಅವರೆ ಬೆಳೆಗಳನ್ನು ಬಿತ್ತಿದರೆ ಇಳುವರಿಯಲ್ಲಿ ಗಮನಾರ್ಹ ಕಡಿತವನ್ನು, ಇತ್ತೀಚಿನ ವರ್ಷಗಳ ಅನುಭವದ ಮೂಲಕ, ಕಾಣಲಾಗಿದೆ.

ಚಳಿಗಾಲದಲ್ಲಿ ಬೆಳೆಗಳ ಇಳುವರಿಯಲ್ಲಿ ಸುಧಾರಣೆಗೆ ಪೋಷಕಾಂಶಗಳ ಸಿಂಪಡಣೆ ಅತ್ಯಗತ್ಯ. ಪೋಷಕಾಂಶಗಳ ಬಳಕೆ ಮಾತ್ರ ತೇವಾಂಶ ಲಭ್ಯತೆ ಅವಲಂಬಿಸಿರಬೇಕು.

ಹೀರೆ, ಸೌತೆಗಳಲ್ಲಿ ನೀರು ನಿರ್ವಹಣೆ ಸಮರ್ಪಕವಾಗಿ ಮಾಡುವ ಮೂಲಕ. ಕಾಯಿಗಳು ಕಹಿಯಾಗದಿರುವಂತೆ ಮಾಡಲು ಸಾಧ್ಯ.

ಬೇಸಿಗೆ ಭತ್ತದಲ್ಲಿ ಬೆರಕೆ ಭತ್ತದ ಸಮಸ್ಯೆ ನಿವಾರಿಸಲು ಸಮರ್ಪಕವಾಗಿ ಕೆಸರು ಗದ್ದೆ ನಿರ್ವಹಣೆ ಅಗತ್ಯ. ಉತ್ತಮ ಇಳುವರಿಗಾಗಿ ಸಸಿ ಮಡಿಯಲ್ಲಿ ಡಿಸೆಂಬರ್ 20 ರೊಳಗೆ ಬಿತ್ತನೆ ಅತ್ಯಗತ್ಯ. ಸಸಿ ಮಡಿಯಲ್ಲಿ ಅಂಗಮಾರಿ ರೋಗ ನಿರ್ವಹಣೆಗೆ ಸಗಣಿರಾಡಿಯ ತಿಳಿ ಸಿಂಪಡಣೆ ಅಗತ್ಯವಾಗಿದೆ.

ಇಂತಹ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲು ನಂಬಿಕೆಯ ತಜ್ಞರ ಸಲಹೆಯನ್ನು ಅಗತ್ಯವಾಗಿ ಪಡೆಯಬೇಕು ಎಂದು ವೇದಿಕೆಯ ಆರ್.ಜಿ ಗೊಲ್ಲರ್ ತಿಳಿಸಿದ್ದಾರೆ.

# ಮಲೇಬೆನ್ನೂರು; ಅಂಬೇಡ್ಕರ್ ಮಹಾಪರಿನಿರ್ವಾಣ





ಮಲೇಬೆನ್ನೂರು, ಡಿ.6- ಪಟ್ಟಣದ ಮುಖ್ಯ ವೃತ್ತದಲ್ಲಿ ಮತ್ತು ಎ.ಕೆ. ಕಾಲೋನಿಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 68ನೇ ಮಹಾಪರಿನಿರ್ವಾಣ ದಿನವನ್ನು ಎ.ಕೆ. ಕಾಲೋನಿಯ ಯುವಕರು ಶ್ರದ್ಧಾ-ಭಕ್ತಿಯಿಂದ ಆಚರಿಸಿದರು.

ಅಂಬೇಡ್ಕರ್ ಅವರ ಭಾವಚಿತ್ರದ ಎದುರು ಮೇಣದ ಬತ್ತಿಗಳನ್ನು ಹಚ್ಚಿ ಭಾವಪೂರ್ಣ ನಮನ ಸಲ್ಲಿಸಿದರು.

ಪುರಸಭೆ ಮಾಜಿ ಸದಸ್ಯ ಎ.ಕೆ. ಲೋಕೇಶ್, ಎ.ಕೆ. ಪ್ರಕಾಶ್, ಎ.ಕೆ. ನಾಗರಾಜ್, ಎ.ಕೆ. ಬಸವರಾಜಪ್ಪ, ಎ.ಕೆ.ದೇವರಾಜ್, ಎ.ಕೆ. ಮಂಜುನಾಥ್, ಎ.ಕೆ. ರಾಜಪ್ಪ, ಎ.ಕೆ.ಆಂಜನೇಯ, ಕರುಣ, ದರ್ಶನ್, ಮಣಿಕಂಠ, ವರುಣ ಮತ್ತು ಶೀಲಮ್ಮ, ಗೌರಮ್ಮ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಮುಖ್ಯ ವೃತ್ತದಲ್ಲಿ ಕೆ.ಪಿ. ಗಂಗಾಧರ್, ಪಿ.ಆರ್. ಕುಮಾರ್, ಪಿ.ಹೆಚ್. ಶಿವಕುಮಾರ್, ಜಿಗಳಿಯ ಬಿ.ಎಂ. ದೇವೇಂದ್ರಪ್ಪ, ಕೆ.ಎಸ್. ನಂದ್ಯಪ್ಪ, ಪತ್ರಕರ್ತ ಪ್ರಕಾಶ್ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ನಮನ ಸಲ್ಲಿಸಿದರು.

## ಗ್ರಂಥಾಲಯದಲ್ಲಿ ಪರಿನಿರ್ವಾಣ ದಿನ



ದಾವಣಗೆರೆ, ಡಿ.6- ನಗರದ ಗ್ರಂಥಾಲಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ರವರ 68ನೇ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಗ್ರಂಥಾಲಯ ಅಧಿಕಾರಿಗಳಾದ ಡಿ. ತಿಮ್ಮಾರಾಯ್ ಮತ್ತು ವೈದ್ಯ ದ್ಯಾಮಣ್ಣ, ರಾಮದಾಸ್ ಬುರ್ಲಯ್ಯ, ಪತ್ರಕರ್ತರಾದ ಸಿ.ವೈ. ಗಂಗಾಧರ್ ಓ.ಎಂ. ರೂಪಾ, ಭೋಜರಾಜ್ ಮತ್ತಿತರರು ಭಾಗವಹಿಸಿದ್ದರು.

## ಉಕ್ಕಡಗಾತ್ರಿ; ಮೌಢ್ಯ ವಿರೋಧಿ ದಿನ



ಮಲೇಬೆನ್ನೂರು, ಡಿ.6- ಉಕ್ಕಡಗಾತ್ರಿ ಗ್ರಾಮದ ರುದ್ರಭೂಮಿಯಲ್ಲಿ ಮಾನವ ಬಂಧುತ್ವ ವೇದಿಕೆಯಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 86ನೇ ಪರಿನಿರ್ವಾಣ ದಿನದ ಪ್ರಯುಕ್ತ ಮೌಢ್ಯ ವಿರೋಧಿ ದಿನವನ್ನಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಉಕ್ಕಡಗಾತ್ರಿ ಪ್ರಗತಿಪರ ಯುವಕರು ಭಾಗವಹಿಸಿದ್ದರು.

# ಅಂಬೇಡ್ಕರ್ ಚಿಂತನೆ, ವಿಚಾರಧಾರೆ, ಜೀವನ ಚರಿತ್ರೆ ಅಧ್ಯಯನ ಅತ್ಯಗತ್ಯ

**(1ನೇ ಪುಟದಿಂದ)** ಎಂದರು.

ಅಂಬೇಡ್ಕರ್ ಚಿಂತನೆಗಳನ್ನು ನಾಶಗೊಳಿಸಿದರೆ ಈ ದೇಶವನ್ನು ಮತ್ತೆ ಸನಾತನದ ಕಡೆ ಹೊತ್ತಯ್ಯಬಹುದು ಎಂಬ ದೊಡ್ಡ ಕಲ್ಪನೆಯಲ್ಲಿದ್ದಾರೆ. ನಾವೆಲ್ಲರೂ ಸೌಹಾರ್ದತೆ ಭಾರತ ಕಟ್ಟಬೇಕಾದರೆ, ಬಹುತ್ವ ಭಾರತ ಜೀವಂತ ಉಳಿಸಲು ಅಂಬೇಡ್ಕರ್ ಚಿಂತನೆಗಳು, ಹೋರಾಟ ಅನಿವಾರ್ಯ ಎಂದು ಹೇಳಿದರು.

ನಾವೆಲ್ಲರೂ ಒಟ್ಟುಗೂಡಬೇಕಾಗಿದೆ. ಇಂತಹ ಚಿಂತನೆಗಳನ್ನು ಮೂಡಿಸಬೇಕಾಗಿದೆ. ಮನುಷ್ಯ ಮನುಷ್ಯರಲ್ಲಿನ ಸಂಬಂಧ ಬೆಸೆಯುವ ಕೆಲಸವನ್ನು ಮಾನವ ಬಂಧುತ್ವ ವೇದಿಕೆ ಬಹಳ ವರ್ಷಗಳಿಂದ ಮಾಡುತ್ತಾ ಬಂದಿದೆ. ಸಂವಿಧಾನ ಉಳಿಸುವ ಮತ್ತು ವಾಸ್ತವೀಕರಿಸುವ ಕೆಲಸ ಮಾಡಬೇಕಾದ ಅಗತ್ಯವಿದೆ ಎಂದರು.

ವಿಶ್ರಾಂತ ಪ್ರಾಚಾರ್ಯ ಡಾ. ದಾದಾಪೀರ್ ನವಿಲೇಹಾಳ್ ಮಾತನಾಡಿ, ಅಂಬೇಡ್ಕರ್ ನಂತರದ ಭಾರತ ಕುರಿತು ಬಹಳ ದೊಡ್ಡ ಅಧ್ಯಯನಗಳಾಗಬೇಕಾದ ಅವಶ್ಯಕತೆ ಇದೆ. ಗಾಂಧಿ ನಂತರದ ಮತ್ತು ನೆಹರು ನಂತರದ ಭಾರತದ ಅಧ್ಯಯನ ಕುರಿತು ಸಂಶೋಧನೆಗಳಾಗಿವೆ. ಆದರೆ ಅಂಬೇಡ್ಕರ್ ನಂತರದ ಭಾರತದ ಬಗ್ಗೆ ಸಮಗ್ರವಾದ ಸಂಶೋಧನೆಗಳಾಗಬೇಕಾಗಿದೆ ಎಂದರು.

ಸರ್ಕಾರಿ, ಖಾಸಗಿ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಈ ರೀತಿಯ ಅಧ್ಯಯನ, ಸಂಶೋಧನೆಗಳನ್ನು ಮಾಡಬೇಕಾದ ಅಗತ್ಯವಿದೆ. ಎಷ್ಟೇ ಬಲಿಷ್ಠವಾದ ಸಂವಿಧಾನ, ವಿಶಾಲವಾದ ಮೌಲ್ಯಗಳಿದ್ದರೂ ಸಹ ಒಬ್ಬ ಕೆಟ್ಟ ಆಡಳಿತಗಾರನ ಕೈಯಲ್ಲಿ ಅಧಿಕಾರ ಸಿಕ್ಕರೆ ಎಲ್ಲವೂ ನಿಷ್ಪ್ರಯೋಜಕವಾಗಲಿದೆ ಎಂದು ಹೇಳಿದರು. ಸಂವಿಧಾನಕ್ಕೆ ಅನೇಕ ತಿದ್ದುಪಡಿಗಳಾಗಿವೆ. ಕಾಲ ಕಾಲಕ್ಕೆ ಸೇರ್ಪಡೆ ಮಾಡುವ ಕೆಲಸವನ್ನು ಸರ್ಕಾರ ಮಾಡಿದೆ. ಕಳೆದ ಹತ್ತು ವರ್ಷಗಳಿಂದ ಸಂವಿಧಾನ ದುರ್ಬಲಗೊಳಿಸುವ ವಾಮಮಾರ್ಗವನ್ನು ಇವತ್ತಿನ ಸರ್ಕಾರಗಳು ಮಾಡುತ್ತಿವೆ ಎಂದು ವಿಷಾದಿಸಿದರು.

ಅಂಬೇಡ್ಕರ್ ಓದಿನ ಮೂಲಕ ಒಳದನಿಯಾಗಬೇಕಾಗಿದೆ. ಅಂಬೇಡ್ಕರ್ ಪುಸ್ತಕಗಳನ್ನು ನಿರಂತರ ಅಧ್ಯಯನಗಳಾಗಬೇಕಾಗಿದೆ. ಓದಿನ ಮೂಲಕವೇ ಹೊಸದೊಂದು ಆಲೋಚನಾ ಕ್ರಮವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅಂಬೇಡ್ಕರ್ ಶಿಕ್ಷಣವನ್ನು ಸಾಧನವನ್ನಾಗಿ ಬಳಸಿದ್ದರು. ಆದರೆ ಇಂದಿನ ರಾಜಕಾರಣಿಗಳು ಶಿಕ್ಷಣವನ್ನು ಆಯುಧವನ್ನಾಗಿ ಬಳಕೆ ಮಾಡುತ್ತಿರುವುದು ವಿಪರ್ಯಾಸದ ಸಂಗತಿ ಎಂದು ಹೇಳಿದರು.

ವಿವಿಧ ಸಂಘಟನೆಗಳ ಪ್ರಮುಖರುಗಳಾದ ಆವರಗೆರೆ ರುದ್ರಮುನಿ, ರುದ್ರಗೌಡ್ರು, ಹೆಚ್.ಸಿ. ಗುಡ್ಡಪ್ಪ, ಸತೀಶ ಅರವಿಂದ್, ಕತ್ತಲಗೆರೆ ತಿಪ್ಪಣ್ಣ, ಅನಿಸ್ ಪಾಷಾ ಅಂಬೇಡ್ಕರ್ ಜೀವನ, ಸಾಧನೆ, ಆದರ್ಶಗಳ ಕುರಿತು ಮಾತನಾಡಿದರು.

ಹನುಮಂತಪ್ಪ, ಲಕ್ಷ್ಮಣ್, ಮಾಡಾಳು ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಕೊರತೆ ಇದ್ದರೂ ಅನುದಾನ

**(1ನೇ ಪುಟದಿಂದ)** ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ವಸತಿ ಶಾಲೆ, ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ ಖರೀದಿಸಲು 43.95 ಕೋಟಿ ರೂ.ಗಳ ಬಿಡುಗಡೆಗೆ ಸಮ್ಮತಿಸಿದೆ.

ಬೆಂಗಳೂರು ಮೆಟ್ರೊ ಯೋಜನೆಯ 2ನೇ ಹಂತದ 40,614 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ ಅನುಮತಿ ನೀಡಿರುವುದಲ್ಲದೆ, ಬೆಂಗಳೂರು ನಗರದ ರಸ್ತೆ ಗುಂಡಿ ಮುಚ್ಚಲು ಹಾಗೂ ತುರ್ತು ಕಾಮಗಾರಿ ಕೈಗೊಳ್ಳಲು 694 ಕೋಟಿ ರೂ.ಗಳ ಪರಿಷ್ಕೃತ ಯೋಜನೆಗೆ ಮಂಜೂರಾತಿ ನೀಡಲಾಗಿದೆ.

ನಗರದ ಸಂಪಂಗಿರಾಮ ನಗರದಲ್ಲಿ 40.05 ಕೋಟಿ ರೂ. ವೆಚ್ಚದಲ್ಲಿ ಸಮಾಜ ಕಲ್ಯಾಣ ಭವನ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ಸರ್ಕಾರದ ಎಲ್ಲಾ ತೆರನಾದ ಆಸ್ಪತ್ರೆಗಳಲ್ಲಿ ರೋಗ ಪತ್ತೆ ಮತ್ತು ಉಚಿತ ಔಷಧಗಳ ಖರೀದಿಗೆ 19.70 ಕೋಟಿ ರೂ.ಗೆ ಸಂಪುಟ ಅನುಮೋದನೆ ನೀಡಿದೆ.

## ಚಿನ್ನ, 23 ಕೋಟಿ ರೂ.ನಗದು

**(1ನೇ ಪುಟದಿಂದ)** ದೇವಾಲಯದ ಮುಖ್ಯಸ್ಥರು ಹೇಳಿದ್ದಾರೆ.

ದೇವಾಲಯದ ಇತಿಹಾಸದಲ್ಲೇ ಇಷ್ಟು ಪ್ರಮಾಣದ ಕಾಣಿಕೆ ಸಂಗ್ರಹ ವಾಗಿರುವುದು ಅತಿದೊಡ್ಡ ದಾಖಲೆಯಾಗಿದೆ ಎಂದು ಅವರು ಹೇಳಿದರು. ಪ್ರತಿ ತಿಂಗಳ ಅಮಾವಾಸ್ಯೆಯಂದು ಕಾಣಿಕೆ ಹುಂಡಿಯ ಎಣಿಕೆ ಪ್ರಕ್ರಿಯೆ ನಡೆಯಲಿದೆ.

## ನಗರದಲ್ಲಿ ಇಂದು ನೇರ ಸಂದರ್ಶನ

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಾದರಿ ವೃತ್ತಿ ಕೇಂದ್ರದ ಬೆಳಿಗ್ಗೆ ಬೆಳಗ್ಗೆ 10 ಗಂಟೆಗೆ ವಾಕ್‌ಇನ್ ಇಂಟರ್‌ವ್ಯೂವ್ ಅನ್ನು ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಆಯೋಜಿಸಲಾಗಿದೆ. ವಾಕ್‌ಇನ್ ಇಂಟರ್‌ವ್ಯೂವ್‌ದಲ್ಲಿ ಖಾಸಗಿ ಸಂಸ್ಥೆಗಳು ಭಾಗವಹಿಸುತ್ತಿದ್ದು, ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆ ಗಳಿಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಡಿಪ್ಲೋಮಾ, ಪದವಿಯಲ್ಲಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಗಳನ್ನು ನೇಮಕಾತಿ ಮಾಡಿಕೊಳ್ಳಲಿ ದ್ದಾರೆ. ವಿವರಕ್ಕೆ 74838 08321 08192-259446 ಸಂಪರ್ಕಿಸಬಹುದು.


**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಬನಶಂಕರಿ ಲೇಔಟ್‌ನಲ್ಲಿ 40x45 East, 30x40 West 40 ಅಡಿ ರೋಡ್‌ಗಿದೆ. 30x57 East, 40x60 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಮಾರಾಟಕ್ಕಿದೆ**
#1, 356/10'C' ಸವಣೂರ ಪ್ಲಾಜಾ ಹಿಂಭಾಗ, ಪಿ.ಬಿ. ರೋಡ್, ದಾವಣಗೆರೆ, 60+55/2x40=2300, ಅಡಿ ವಿಸ್ತೀರ್ಣದಲ್ಲಿ ಕಟ್ಟಿರುವ ಗ್ರೌಂಡ್ ಫ್ಲೋರ್ ಮನೆ ಮಾರಾಟಕ್ಕಿದೆ. 1 ಕೋಟಿ, 30 ಲಕ್ಷಕ್ಕೆ
9742261666, 94498 96502

**ಬೇಕಾಗಿದ್ದಾರೆ**
ಮನೆಯ ಅಡುಗೆ ಕೆಲಸಕ್ಕೆ ಅನುಭವವುಳ್ಳ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ವಿದ್ಯಾನಗರ, ಕಾಫಿ ಡೇ ಹತ್ತಿರ, ದಾವಣಗೆರೆ.
99457 64377, 9449973956

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟ್ ಮಾರಾಟಕ್ಕಿದೆ**
ಬಸವೇಶ್ವರ ಬಡಾವಣೆಯಲ್ಲಿ ಸೈಟ್ ನಂ. 412ರ 40x70 ಅಳತೆಯ ದಕ್ಷಿಣ ಸೈಟ್ ಮಾರಾಟಕ್ಕಿದೆ.
99023 71609

**ಟೆಲಿ ಕಾಲರ್ಸ್ ಬೇಕಾಗಿದ್ದಾರೆ**
ಫೈನಾನ್ಷಿಯಲ್ ಫೀಲ್ಡ್‌ನಲ್ಲಿ ಕೆಲಸ ಮಾಡಲು B.Ed ಆದ ಮಹಿಳೆಯರು ಬೇಕಾಗಿದ್ದಾರೆ
98447 43673

**ವೃದ್ಧಾಶ್ರಮ**
ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ ತುಂಬಿಗೆರೆ ಪೋ. ದಾವಣಗೆರೆ ತಾಲ್ಲೂಕು. ಈ ಸಂಸ್ಥೆ ನಡೆಸುತ್ತಿರುವ ವೃದ್ಧಾಶ್ರಮವನ್ನು ಸೇರಲು ಬಯಸುವ 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ:
99001 42052
97319 93770

**ಮನೆಗಳು ಲೀಸ್‌ಗೆ ಇವೆ**
ದಾವಣಗೆರೆ ಹೊಸ ಕೋರ್ಟ್ ಹತ್ತಿರ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್‌ನಲ್ಲಿ ಒಂದು ಬೆಡ್ ರೂಂನ 2 ಮನೆಗಳು ಲೀಸ್‌ಗೆ ಲಭ್ಯವಿದೆ. ಸಂಪರ್ಕಿಸಿ:
63660 20922

**TO LET**
2 BHK House for Lease
Doggalli Compound,
Near LIC Office,
K.R. Road, Davangere.
90359 66066

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 40x60 North, 80x60 North, 30x50 South, 30x40 North, 30x45 East, 30x45 ಕಾರ್ನರ್.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**ಬೇಕಾಗಿದ್ದಾರೆ**
ಕಂಪ್ಯೂಟರ್ ಹಾರ್ಡ್‌ವೇರ್ ಇಂಜಿನಿಯರ್ ಅಂಡ್ ಆಫೀಸ್ ಬಾಯ್ ಬೇಕಾಗಿದ್ದಾರೆ. ಕೆಳಗಿನ ನಂಬರ್‌ಗೆ ಸಂಪರ್ಕಿಸಿ
95918 52583

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**CARS FOR SALE**
Hyundai Creta Diesel
New I20 Asta
Toyota Innova [V]
Alto K10 vxi
Contact : Daivik Iynahalli
99456 43223

**ಬೇಕಾಗಿದ್ದಾರೆ**
ರಾಂ ಅಂಡ್ ಕೋ ಸರ್ಕಲ್ ಬಳಿಯಿರುವ ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲುಯ ಹುಡುಗರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**FOR RENT**
Face : Purva
Owner name: Dakshayini SN
House and Rooms only for Rent. K.B. Extension Davanagere.
70265 64680

**ಐಸ್ ಕ್ರೀಂ ಕೌಂಟರ್ ಬಾಡಿಗೆಗೆ ಇದೆ**
ನರಸರಾಜ ರಸ್ತೆಯಲ್ಲಿ ಐಸ್ ಕ್ರೀಂ ಕೌಂಟರ್ ಬಾಡಿಗೆಗೆ ಇದೆ.
ಸಂಪರ್ಕಿಸಿ :
90367-34919

**WANTED**
Boys required for billing work at
Food Mart Supermarket.
Quali : Any Degree
Mob : 98864 63531

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಕೆಲಸಕ್ಕೆ ಪುರುಷರು ಆಫೀಸ್ ಕೆಲಸಕ್ಕೆ - ಹುಡುಗಿಯರು
ಸಂಬಳ 9,000 to 10,000
90362 37886

**ಮನೆ ಬಾಡಿಗೆಗಿದೆ**
ಶಿವಕುಮಾರಸ್ವಾಮಿ ಬಡಾವಣೆ, ಮೊದಲನೇ ಹಂತ, ಶಿವವಿನಾಯಕ ದೇವಸ್ಥಾನದ ಹತ್ತಿರ ಮೊದಲನೇ ಮಹಡಿ 4BHK ಮನೆ ಬಾಡಿಗೆಗೆ ಮತ್ತು 1BHK.
94802 82894, 88840 40911

**ಬೇಕಾಗಿದ್ದಾರೆ**
ಬೆಳ್ಳಿ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆದ್ಯತೆ.
ಸಂಪರ್ಕಿಸಿ:
ಮೊ. 87924 69206

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಫ್ಲಾಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ
98440 65710

**ಅಡಿಕೆ ತೋಟ ಮಾರಾಟಕ್ಕಿದೆ**
ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ತೆಲಗಿ ಗ್ರಾಮ, 3 ಎಕರೆ.
ಆರ್.ಜಿ. ರೇವಣಸಿದ್ದಪ್ಪ
9739117958
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
100% Legal Documents Upto date loan facility for purchase & Development of Agri land.

**NEED COMPUTER OPERATOR**
FOR CYBER SHOP
Near Ram & Co Circle, DVG
70221 58935

**ಬೇಕಾಗಿದ್ದಾರೆ**
ಸಿಸಿಟಿವಿ ಕೆಲಸಕ್ಕೆ ಎಲೆಕ್ಟ್ರೀಷಿಯನ್ಸ್ ಬೇಕಾಗಿದ್ದಾರೆ.
R COMPUTERS
ಡೆಂಟಲ್ ಕಾಲೇಜ್ ರಸ್ತೆ, ಹೋಟೆಲ್ ಸರೋವರ ಹತ್ತಿರ, MCC 'ಬಿ' ಬ್ಲಾಕ್, ದಾವಣಗೆರೆ-4.
8722113803, 9611877204

**ಮನೆ ಬಾಡಿಗೆಗೆ ಇದೆ**
(40x60) ರಂಗನಾಥ್ ಬಡಾವಣೆ, ವಿದ್ಯಾನಗರ ಲಾಸ್ಟ್ ಬಸ್‌ಸ್ಟಾಪ್ ಹತ್ತಿರ, 3 BHK, ಡ್ಯೂಪ್ಲೆಕ್ಸ್, ವೆಲ್ ಫರ್ನಿಷ್ಡ್, ಇನ್‌ಡಿಪೆಂಡೆಂಟ್ ಹೌಸ್, ಸೋಲಾರ್ ವಾಟರ್, ಸ್ವಂತ ಬೋರ್‌ವೆಲ್, ಗಾರ್ಡನ್ ಸೌಲಭ್ಯವಿದೆ.
97395 14877

**ಕಟ್ಟಡ ಬಾಡಿಗೆಗೆ**
ಕಾಲೇಜು ಅಥವಾ ತರಬೇತಿ ಕೇಂದ್ರಕ್ಕಾಗಿ ಬಾಡಿಗೆಗೆ ಕಟ್ಟಡ ಲಭ್ಯವಿದೆ. ಹರಿಹರ, ಕಾಳಿದಾಸ ನಗರದಲ್ಲಿ ಪ್ರಖ್ಯಾತ ಸ್ಥಳದಲ್ಲಿ ಕಾಲೇಜು ಅಥವಾ ತರಬೇತಿ ಕೇಂದ್ರಕ್ಕೆ ಸೂಕ್ತವಾದ ಬಾಡಿಗೆ ಕಟ್ಟಡ ಲಭ್ಯವಿದೆ.
ಸಂಪರ್ಕಿಸಿ: 63660 20922

**ಬೇಕಾಗಿದ್ದಾರೆ**
ಆರ್ಡರ್ ಬುಕ್ಕಿಂಗ್ / ಸ್ವವಿವರದೊಂದಿಗೆ ಸಂಪರ್ಕಿಸಿ
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಮನೆ ಮಾರಾಟಕ್ಕಿದೆ**
ಚಿಕ್ಕನಹಳ್ಳಿ ಬಡಾವಣೆಯಲ್ಲಿ 15x40 RCC ಮನೆ ಮಾರಾಟಕ್ಕಿದೆ.
ಆಂಜನೇಯ ಬಡಾವಣೆಯಲ್ಲಿ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
94486 55850

**ಹೋಂ ನರ್ಸಿಂಗ್ ಸರ್ವೀಸ್**
ಹೆಲ್ತ್‌ಕೇರ್ ಮಹಿಳೆಯರು ಮತ್ತು ಪುರುಷರಿಗೆ ಸ್ನಾನ, ಡೈಪರ್ ಚೇಂಜ್, ವಾಕ್ 1/2 ಗಂಟೆ 1, 2 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಕೆಲಸಕ್ಕೆ ಸಿಗುತ್ತಾರೆ. ಬೇಕಾದವರು ಕರೆ ಮಾಡಿ. ವಯಸ್ಸಾದ ಜೆಂಟ್ಸ್ ಲೇಡಿಸ್ ಇವರಿಗೆ ಬೇಕಾದರೆ ಕರೆ ಮಾಡಿ. ಕೆಲಸಕ್ಕೆ ಬೇಕಾದರೆ ಈ ನಂಬರಿಗೆ ಕರೆ ಮಾಡಿ.
ಶಿಲ್ಪಾ 91644 93271

**2BHK ಮನೆ ಬಾಡಿಗೆಗೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಎ' ಬ್ಲಾಕ್, 8ನೇ ಕ್ರಾಸ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 2 BHK ಮನೆ ಬಾಡಿಗೆಗೆ ಇದೆ. ಬೋರ್ ಮತ್ತು ನಲ್ಲಿ ನೀರಿನ ವ್ಯವಸ್ಥೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
95907 21624, 78922 68073

**ಉಚಿತ ಕಂಪ್ಯೂಟರ್ ಕೋರ್ಸ್**
ಕಂಪ್ಯೂಟರ್ ಬೇಸಿಕ್ ಕೋರ್ಸ್ ಅನ್ನು ಉಚಿತವಾಗಿ ಕಲಿಯಿರಿ ಹಾಗೂ MS Office, Typing Q, Tally Prime ಕೋರ್ಸ್‌ಗಳನ್ನು ಕೈಗೆಟಕುವ ದರದಲ್ಲಿ ಕಲಿಯಿರಿ. Limited Seats Only.
Radar Computer Center
PJ Extn., Near Byadagi Shetru School.
81235 13157, 91108 97420

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಕಾರ್ನರ್ ಮಳಿಗೆ ಬಾಡಿಗೆಗಿದೆ**
20x30 ಸೈಟ್ ಆಫೀಸ್/ಹಾಲ್‌ಗೆ ಸೂಕ್ತವಾಗಿದೆ.
1ನೇ ಮಹಡಿ, 2ನೇ ಮೇನ್, 1ನೇ ಕ್ರಾಸ್, ಚಿಕ್ಕಮ್ಮಣಿ ಬಡಾವಣೆ, ದಾವಣಗೆರೆ.
90607 90962
98444 93825

**ಸೊಳ್ಳೆ ಮೆಷ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್ ಸೋಫಾ ಸೆಟ್, ಡುರೋಪ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ
98445 81966

**ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗುತ್ತಿರುವ ಹೋಂ ಅಪ್ಲೈಯನ್ಸಸ್ ಶಾಪ್‌ಗೆ ಕೆಲಸ ಮಾಡಲು
* ಸೇಲ್ಸ್ ಗರ್ಲ್ಸ್ & ಬಾಯ್ಸ್
* ಅಕೌಂಟ್ಸ್ * ಟೆಲಿಕಾಲರ್ಸ್
ಅನುಭವವುಳ್ಳವರಿಗೆ ಪ್ರಥಮ ಆದ್ಯತೆ
ಸ್ಥಳ : ಹರಿಹರ.
77603 10603
99648 75861

**CHANGE OF NAME**
I, BALAJI CHANNAGIRI SREEDHARAMURTHY (BALAJI CHINGRE SREEDHARAMURTHY), Previously called BALAJI CHANNAGIRI SREEDHARAMURTHY (BALAJI CHINGRE SREEDHARAMURTHY) resident of # 654/2, S.K.P. Road, Davangere-577 001. Davangere Taluk & District. have Changed my name as BALAJI CHANNAGIRI SREEDHARAMURTHY Vide Offidavit date 6.12.2024 sworn before notary Kalyanamma M.K. Davangere. Henceforth all my transactions & dealings will be in my new name.
BALAJI CHANNAGIRI SREEDHARA MURTHY

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಅಂಬೇಡ್ಕರ್ ವಿಶ್ವದ ಮಹಾನ್ ಚಿಂತಕರಾಗಿದ್ದರು



## ಅಂಬೇಡ್ಕರ್ ಮಹಾಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಡಿ. ಬಸವರಾಜ್

ದಾವಣಗೆರೆ, ಡಿ.6- ಕೇಂದ್ರ ಹಾಗೂ ಕೆಲ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಆಡಳಿತಕ್ಕೆ ಬಂದ ದಿನದಿಂದಲೂ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ರಚಿಸಿದ ಸಂವಿಧಾನ ಬದಲಿಸಲು ತೆರೆಮರೆಯಲ್ಲಿ ಹುನ್ನಾರ ನಡೆಸುತ್ತ ಬಂದಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಹೇಳಿದರು.

ನಗರದ ಎಂಸಿಸಿ 'ಎ' ಬ್ಲಾಕ್‌ನಲ್ಲಿ ಏರ್ಪಡಿಸಿದ್ದ ಸಂವಿಧಾನ ಶಿಲ್ಪಿ, ಭಾರತ ರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ 168ನೇ ಮಹಾಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮ ದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ವಿಶ್ವದ ಮಹಾನ್ ಚಿಂತಕರಲ್ಲಿ ಒಬ್ಬರಾಗಿದ್ದರು. ಅವರು ಭಾರತ ದೇಶಕ್ಕಾಗಿ ರಚಿಸಿದ ಸಂವಿಧಾನ ಜಗತ್ತಿನಲ್ಲಿಯೇ ಶ್ರೇಷ್ಠ ಸಂವಿಧಾನ ಎಂಬ ಹೆಗ್ಗಳಿಕೆ ಹೊಂದಿದೆ ಎಂದರು.

ಅಂಬೇಡ್ಕರ್ ಮಹಾದಾರ್ಶನಿಕರು ಹಾಗೂ ಮಾನವತೆಯ ರಾಯಭಾರಿಯಾಗಿದ್ದರು. ಶೋಷಿತರ ಬದುಕನ್ನು ಕಟ್ಟಿಕೊಡಲು ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟರು.

ಶೋಷಿತರು ಎಂದರೆ ಕೇವಲ ದಲಿತ ವರ್ಗದವರಲ್ಲದೆ ಇಡೀ ಮಾನವ ಸಮಾಜದಲ್ಲಿ ತುಳಿತಕ್ಕೆ ಒಳಗಾದ ಎಲ್ಲಾ ವರ್ಗದ ಜನರ ಧ್ವನಿಯಾಗಿ ಸಮಾನತೆ, ಸಹೋದ ರತೆ ಗಾಗಿ ಮೇಲು-ಕೀಳು ಎಂಬ ಭೇದ-ಭಾವ ಇರಬಾರದು ಎಂದು ಪ್ರತಿಪಾದನೆ ಮಾಡಿದಂತ ವರು ಹಾಗೂ ಎಲ್ಲಾ ವರ್ಗಕ್ಕೆ ಸಾಮಾಜಿಕ ನ್ಯಾಯ ನೀಡಿದ ಮಹಾನ್ ಮಾನವತವಾದಿಯಾಗಿದ್ದರು ಎಂದು ಬಸವರಾಜ್ ಹೇಳಿದರು.

ಅಂಬೇಡ್ಕರ್ ಜಾತಿ ಪದ್ಧತಿಯ ವಿರುದ್ಧವಾಗಿ ದೊಡ್ಡ ಹೋರಾಟವನ್ನೇ ಮಾಡಿದರು. ಜಾತಿಪದ್ಧತಿ, ಅಸ್ಪ ಶ್ಯತೆ, ಬಡತನ ಮುಂತಾದ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಸಂವಿಧಾನದಲ್ಲಿ ಸೂಚಿಸಿದ್ದಾರೆ. ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಹನ್ನೊಂದುವರೆ ವರ್ಷಗಳಲ್ಲಿ ಜಾತ್ಯತೀತ ಭಾರತ ಜಾತಿ ಆಧಾರಿತ ಭಾರತವಾಗುತ್ತಿದೆ ಎಂದು ಡಿ. ಬಸವರಾಜ್ ಆತಂಕ ವ್ಯಕ್ತಪಡಿಸಿದರು.

ಡಾ. ಅಂಬೇಡ್ಕರ್ ಸಾಧನೆಗಳನ್ನು ನೋಡಿದರೆ ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲಾ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಭಾರತದಲ್ಲಿ ಪವಾಡ ಪುರುಷರೆಂದೇ ಹೆಸರಿಸಬೇಕಾಗುತ್ತದೆ. ಬಾಲ್ಯದಲ್ಲಿ ವಿದ್ಯಾಭ್ಯಾಸ ಮಾಡಲು ಹಲವು ಅಡ್ಡಿ ಆತಂಕಗಳನ್ನು ಎದುರಿಸಿದ ಅವರು, ಶಿಕ್ಷಣಕ್ಕೆ ಮಹತ್ವ ನೀಡಿ ಸದಾ ಅಧ್ಯಯನ ಶೀಲರಾಗಿದ್ದರು. ಇಂದು ಜಗತ್ತಿನಲ್ಲಿಯೇ ಅತೀ ಹೆಚ್ಚು ಸಂಪಾದನೆ ಮಾಡಿದವರು ಯಾರಾದರೂ ಇದ್ದರೆ ಅದು ಡಾಕ್ಟರ್ ಮಾತ್ರ.

ಹಾಗಾಗಿ ವಿಶ್ವ ಸಂಸ್ಥೆ ಅಂಬೇಡ್ಕರ್ ರವರ ಜನ್ಮದಿನವಾದ ಏಪ್ರಿಲ್ 14ನ್ನು ವಿಶ್ವ ಜ್ಞಾನದಿನವನ್ನಾಗಿ ಆಚರಿಸಲು ಘೋಷಿಸಿದೆ ಎಂದು ಡಿ. ಬಸವರಾಜ್ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಾದ ಬಿ.ಎನ್. ವಿನಾಯಕ, ಬಿ. ಹೆಚ್. ಉದಯ್ ಕುಮಾರ್, ನಿಟುವಳ್ಳಿ ಪ್ರವೀಣ್ ಕುಮಾರ್ ಎಸ್., ಬಿ. ಕೆ. ವಿನಾಯಕ, ನವೀನ್ ಕುಮಾರ್, ಶಶಿ ಕುಮಾರ್, ಡಿ. ಶಿವಕುಮಾರ್, ಬಿ. ಎಸ್. ಸುರೇಶ್, ಸಿ.ರಮೇಶ್, ಡಿ.ಎಸ್. ಹರೀಶ್, ಭೀಮೇಶ್, ಅಲ್ಲಾವಲ್ಲಿ ಸಮೀರ್ ಖಾನ್ ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ನಾವೀನ್ಯತೆ ಬಲವಾಗಿದ್ದರೆ ದುಡಿಯುವ ಕೈಗಳಿಗೂ ಬಲ

## ಜಿಎಂ ವಿವಿ 'ಇಗ್ನಿಟ್ರಾನ್ 2ಕೆ24' ಕಾರ್ಯಕ್ರಮದಲ್ಲಿ ಬ್ರಹ್ಮಚೈತನ್ಯ ಚಿನ್ನಿವರ್



ದಾವಣಗೆರೆ,ಡಿ.6- ಇಂಜಿನಿಯರಿಂಗ್ ಮತ್ತು ನಾವೀನ್ಯತೆಯಲ್ಲಿ ಭಾರತ ನಿಜವಾಗಿಯೂ ಜಾಗತಿಕ ಶಕ್ತಿಶಾಲಿಯಾಗಿದೆ ಎಂದು ಡಿಎಕ್ಸ್ ಲಕ್ಸಾಟ್ ಇಂಜಿನಿ ಯರಿಂಗ್ ನಿರ್ದೇಶಕ ಬ್ರಹ್ಮಚೈತನ್ಯ ಚಿನ್ನಿವರ್ ತಿಳಿಸಿದರು.

ನಗರದ ಜಿಎಂಐಟಿ ಆವರಣದಲ್ಲಿನ ಜಿಎಂ ಹಾಲಮ್ಮ ಸಭಾಂಗಣದಲ್ಲಿ ಜಿಎಂ ವಿಶ್ವವಿದ್ಯಾ ಲಯದ ವಿದ್ಯಾರ್ಥಿ ವ್ಯವಹಾರಗಳ ನಿರ್ದೇಶ ನಾಲಯ ಮತ್ತು ತಾಂತ್ರಿಕ ಸಮುದಾಯ ವಿಭಾಗದ ವತಿಯಿಂದ ಇದೇ 6 ಮತ್ತು 7 ರಂದು ಹಮ್ಮಿ ಕೊಳ್ಳಲಾಗಿದ್ದ 'ಇಗ್ನಿಟ್ರಾನ್ 2ಕೆ24' ಕಾರ್ಯಕ್ರಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ವಿವಿಧ ಸಂಸ್ಥೆಗಳು 'ನವೀನ ಮನಸ್ಸುಗಳ' ಘೋಷಣೆಯನ್ನು ಅನುಸರಿಸುತ್ತವೆ. ನೀವು ಮಾಡುವ ಯೋಜನೆಗಳು ಹೊಸ ಆಲೋಚನೆಗಳನ್ನು ತರುತ್ತವೆ, ಅದು ನಿಮ್ಮನ್ನು ಇನ್ನಷ್ಟು ಹಂತಗಳಿಗೆ ಕೊಂಡೊಯ್ಯುತ್ತದೆ ಎಂದು ಹೇಳಿದರು.

ಜಿಎಂ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ಆರ್. ಶಂಕಪಾಲ್ ಮಾತನಾಡಿ, ಶಿಕ್ಷಣವು ಕೇವಲ ಕೈಗೆಟುಕುವ ಅಥವಾ ಪೆಟ್ಟಿಗೆಯನ್ನು ಪರಿಶೀ ಲಿಸುವ ವಿಷಯವಾಗಿರಬಾರದು. ಇದು ಬೆಳವಣಿಗೆ, ಪರಿಶೋಧನೆ ಮತ್ತು ಅರ್ಥಪೂರ್ಣವಾದದ್ದನ್ನು ಕಲಿಯುವ ಬಗ್ಗೆ ಇರಬೇಕು. ಇದು ಕೇಳುವ ಮತ್ತು ಹಂಚಿಕೊಳ್ಳುವ ವಯಸ್ಸು. ಆದರೂ, ನಾವು ಈ ಅವಕಾಶವನ್ನು ಕಲಿಯಲು ಮತ್ತು ಆವಿಷ್ಕರಿಸಲು ನಿಜವಾಗಿಯೂ ಬಳಸಿಕೊಳ್ಳುತ್ತಿದ್ದೇವೆಯೇ ಅಥವಾ ನಾವು ಅನುಕೂಲಕರವಾದದ್ದನ್ನು ಹೊಂದಿಸುತ್ತಿದ್ದೇವೆಯೇ ಎಂದು ನಾವು ಪ್ರಶ್ನಿಸಬೇಕು ಎಂದರು.

ಕುಲಸಚಿವ ಡಾ. ಬಿ.ಎಸ್. ಸುನಿಲ್ ಕುಮಾರ್, ವಿದ್ಯಾರ್ಥಿ ವ್ಯವಹಾರಗಳ ನಿರ್ದೇಶನಾಲಯದ ಉಪ ನಿರ್ದೇಶಕ ಎಸ್.ಟಿ. ಮಾರುತಿ ಸೇರಿದಂತೆ ಇತರರು ಭಾಗವಹಿಸಿದ್ದರು.

ವಿದ್ಯಾರ್ಥಿ ವ್ಯವಹಾರಗಳ ನಿರ್ದೇಶನಾಲಯದ ನಿರ್ದೇಶಕ ಡಾ. ಹೆಚ್.ಎಸ್. ಕಿರಣ್ ಕುಮಾರ್ ಸ್ವಾಗತಿಸಿದರು. ಸಹ ಕುಲಪತಿ ಡಾ. ಹೆಚ್.ಡಿ. ಮಹೇಶಪ್ಪ ವಂದಿಸಿದರು.

# ಯಶಸ್ಸಿನ ಹಿಂದೆ ಮಹಿಳೆಯರ ಪಾತ್ರ ಬಹು ಮುಖ್ಯ



## ನ್ಯಾ. ನಿವೇದಿತಾ

ದಾವಣಗೆರೆ, ಡಿ.6- ಮಹಿಳೆಯರ ಪಾತ್ರ ಜೀವನದಲ್ಲಿ ಬಹು ಮುಖ್ಯವಾದದ್ದು, ಮಹಿಳೆಯರು ದುಡಿಯುವುದರಿಂದ ದೇಶದ ಆರ್ಥಿಕ ಮಟ್ಟ ಸುಧಾರಣೆಯಾಗಿದ್ದು, ದುಡಿಯುವ ಹಣದಲ್ಲಿ ಸ್ವಲ್ಪ ಹಣವನ್ನು ಒಂದೊಳ್ಳೆಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಬೇಕು. ಆ ಹಣ ಮುಂದೊಂದು ದಿನ ಅನುಕೂಲಕ್ಕೆ ಬರುತ್ತದೆ ಎಂದು ಹಿರಿಯ ಪ್ರಧಾನ ಸಿವಿಲ್ ನ್ಯಾಯಾಧೀಶೆ ನಿವೇದಿತಾ ಕರೆ ನೀಡಿದರು.

ನಗರದ ಇಂಡಸ್ಟ್ರೀಯಲ್ ಏರಿಯಾ ಶ್ರೀ ಚೌಡೇಶ್ವರಿ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

2005 ರ ನಂತರದಲ್ಲಿ ಬಂದಿರುವ ಕಾನೂನಿನ ನಿಯಮದ ಪ್ರಕಾರ ಮಹಿಳೆಯರು ಕೂಡ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆದುಕೊಳ್ಳುವಂತಹ ಅವಕಾಶವಿದೆ, ಮಹಿಳೆಯರಿಗೆ ವಿಶೇಷವಾದ ಸೇವೆಗಳು ಕಾನೂನಿನಲ್ಲಿವೆ ಲೋಕ ಅದಾಲತ್ ಸೇವೆ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಸಂಸ್ಥೆಯ ಜಿಲ್ಲಾ ನಿರ್ದೇಶಕ ಲಕ್ಷ್ಮಣ್ ಎಂ. ಮಾತನಾಡಿ, ದುಡ್ಡು ಇಲ್ಲದವನು ಬಡವನಲ್ಲ ಜೀವನದಲ್ಲಿ ನಿರ್ದಿಷ್ಟ ಗುರಿ ಕನಸು ಇಲ್ಲದವನು ಬಡವ, ಮಹಿಳೆಯರ ಸಬಲೀಕರಣಕ್ಕಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸದಾ ಸೇವೆ ನೀಡಲು ಸಿದ್ಧ,ಒಂದೊಳ್ಳೆ ಕಾರ್ಯಕ್ರಮದ ಯಶಸ್ಸಿನ ಹಿಂದೆ ಮಹಿಳೆಯ ಪಾತ್ರ ಬಹು ಮುಖ್ಯವಾದದ್ದು,ಜ್ಞಾನ ವಿಕಾಸ ಕಾರ್ಯಕ್ರಮದ ಮುಖಾಂತರ ಮಹಿಳೆಯರಿಗೆ ಕುಟುಂಬ ನಿರ್ವಹಣೆ,ಕಾನೂನು ಅರಿವು,ಇಲಾಖೆ ಪರಿಚಯ,ಉತ್ತಮ ಆರೋಗ್ಯ ನಿರ್ವಹಣೆಗೆ ತರಬೇತಿಗಳ ಮುಖಾಂತರ ಮಹಿಳೆಯರ ಸಬಲೀಕರಣ ಮಾಡಲಾಗುತ್ತಿದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿ, ವಕೀಲರಾದ ಅನಿತಾ ಮಾತನಾಡಿ, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಹೆಣ್ಣು ಮನೆಯಲ್ಲಿ ಮಕ್ಕಳಿಗೆ ಮೊದಲ ಗುರುವಾಗಿ ಮಕ್ಕಳನ್ನು ಪೋಷಿಸಬೇಕು, ಮಕ್ಕಳಿಗಾಗಿ ಆಸ್ತಿಯನ್ನು ಮಾಡಬೇಡಿ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ. ಮಕ್ಕಳ ಭವಿಷ್ಯ ಉಜ್ವಲವಾಗುವುದು ಎಂದರು.

ಕಾರ್ಯಕ್ರಮದಲ್ಲಿ ಗಾಂಧಿನಗರ ಪಿಎಸ್ಐ ಪಿ.ಸಿ. ಲಲಿತಾ, ಯೋಜನಾಧಿಕಾರಿ ಶ್ರೀನಿವಾಸ್ ಬಿ, ಚೌಡೇಶ್ವರಿ ದೇವಸ್ಥಾನ ಸಮಿತಿ ಅಧ್ಯಕ್ಷ ಆನಂದ್, ಹನುಮಂತಪ್ಪ, ಶೈಲಾ ನಾಗರಾಜ್, ಯೋಜನೆಯ ಸಿಬ್ಬಂದಿಗಳು, ಸದಸ್ಯರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

# ರೇಣುಕಾಚಾರ್ಯ ಉಚ್ಚಾಟನೆಗೆ ಒತ್ತಾಯ

ದಾವಣಗೆರೆ, ಡಿ.6- ಮನಬಂದಂತೆ ಹೇಳಿಕೆ ನೀಡಿ, ಪಕ್ಷದ ಶಿಸ್ತನ್ನು ಹಾಳು ಮಾಡುತ್ತಿರುವ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರನ್ನು ಬಿಜೆಪಿಯ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಬೇಕೆಂದು ಹೊನ್ನಾಳಿ ತಾಲ್ಲೂಕು ಬಿಜೆಪಿ ಮುಖಂಡ ಶಾಂತರಾಜ್ ಪಾಟೀಲ್ ಅವರು ಪಕ್ಷದ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೇಣುಕಾಚಾರ್ಯರು ರಾಜಕೀಯಕ್ಕೆ ಬಂದ ನಂತರ ಎಲ್ಲರಿಗೂ ರೆಸಾರ್ಟ್ ರಾಜಕೀಯ ಕಲಿಸಿದ್ದಾರೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಶಾಸಕರ ಗುಂಪು ಕಟ್ಟಿಕೊಂಡು ಚೆನ್ನೈ, ಗೋವಾ ಮತ್ತು ಹೈದ್ರಾಬಾದ್ ರೆಸಾರ್ಟ್‌ಗೆ ಹೋಗಿ ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಮುಕ್ತಿಗೊಳಿಸುವ ಹುನ್ನಾರ ನಡೆಸಿದ್ದರು ಎಂದು ಆರೋಪಿಸಿದರು.

ತಮಿಳುನಾಡು ಚುನಾವಣೆಯಲ್ಲಿ ಬಿಜೆಪಿ ಹಿನ್ನಡೆ ಸಾಧಿಸಲು ಇವರ ಹೇಳಿಕೆಯೇ ಕಾರಣ. ಎಂಪಿಆರ್, ಅಣ್ಣಾಮಲೈ ಅವರ ಬಗ್ಗೆ ಕನಿಷ್ಠವಾಗಿ ಮಾತನಾಡಿದ್ದಾರೆ. ಇದು ಅಲ್ಲಿನ ಚುನಾವಣೆ ಮೇಲೆ ಪ್ರಭಾವ ಬೀರಿದೆ. ಹಾಗಾಗಿ ಡಿ.31ರ ಒಳಗೆ ಅಣ್ಣಾಮಲೈ ಒಡಗೂಡಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಬಳಿ ಇವರನ್ನು ಉಚ್ಚಾಟಿಸುವಂತೆ ಮನವಿ ಮಾಡಲಿದ್ದೇವೆ ಎಂದು ತಿಳಿಸಿದರು.

ಈ ವೇಳೆ ಎ.ಬಿ. ಹನುಮಂತಪ್ಪ, ಎಂ.ಆರ್. ಮಹೇಶ್, ಕೆ.ವಿ. ಚನ್ನಪ್ಪ, ನೆಲಹೊನ್ನೆ ದೇವರಾಜ್, ಸಿದ್ದೇಶ್ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

# ತಾ|| ಕಸಾಪದಿಂದ ಅಕ್ಕಮಹಾದೇವಿಯ ಆದರ್ಶಗಳ ಕುರಿತು ದತ್ತಿ ಉಪನ್ಯಾಸ



ದಾವಣಗೆರೆ, ಡಿ.5- ತಾಲ್ಲೂಕು ಕ.ಸಾ.ಪ. ದಾವಣಗೆರೆ, ಹರಪನಹಳ್ಳಿ ಮುಪ್ಪಣ್ಣ ಸಿದ್ದಮ್ಮ ಪ್ರೌಢಶಾಲೆ ಬೂದಾಳ್ ರಸ್ತೆ ದಾವಣಗೆರೆ ಇವರ ಸಹಯೋಗದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಶಾಲಾ ಆವರಣದಲ್ಲಿ ನಡೆಯಿತು. ಹರಪನಹಳ್ಳಿ ಮುಪ್ಪಣ್ಣ ಸಿದ್ದಮ್ಮ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಆಂಜನೇಯ ಜಿ. ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಯನ್ನಾಡಿದರು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸದಸ್ಯರಾದ ಮಲ್ಲಿಕಾರ್ಜುನ್ ಆರ್. ಹಲಸಂಗಿ ಅಕ್ಕಮಹಾದೇವಿಯ ಆದರ್ಶಗಳ ಕುರಿತು ಉಪನ್ಯಾಸ ನೀಡಿದರು. ಗೌರವ ಉಪಸ್ಥಿತಿ ತಾ|| ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ನಿರ್ದೇಶಕರಾದ ಶ್ರೀಮತಿ ಕೆ.ಜಿ. ಸೌಭಾಗ್ಯ, ಡಾ.ರಾಜಕುಮಾರ್ ವಿದ್ಯಾ ಸಂಸ್ಥೆ ನಿರ್ದೇಶಕರಾದ ಶ್ರೀಮತಿ ರಾಜೇಶ್ವರಿ, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ವಿ. ಹನುಮಂತ್ ರೆಡ್ಡಿ ಉಪಸ್ಥಿತರಿದ್ದರು.

# ಕಂತೆ ಕಂತೆ ನೋಟು

(1ನೇ ಪುಟದಿಂದ) ಕರ್ತವ್ಯವಾಗಿದೆ. ನೋಟುಗಳು ನಕಲಿಯೋ ಅಥವಾ ಅಸಲಿಯೋ ಎಂಬುದು ತಿಳಿದು ಬಂದಿಲ್ಲ ಎಂದು ಅವರು ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಸಭಾಪತಿ ಹೇಳಿಕೆ ಗದ್ದಲಕ್ಕೆ ಕಾರಣವಾಯಿತು. ತನಿಖೆ ಪೂರ್ಣಗೊಳ್ಳದ ಹೊರತು ಸಭಾಪತಿ ಸದಸ್ಯರ ಹೆಸರು ಹೇಳಬಾರದಿತ್ತು ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

# ಇಂದು ನಿಕ್ಷಯ್ ವಾಹನಕ್ಕೆ ಚಾಲನೆ

ಕ್ಷಯ ಪ್ರಕರಣಗಳನ್ನು ಪತ್ತೆ ಹಚ್ಚುವ ಅಭಿಯಾನವನ್ನು ಡಿಸೆಂಬರ್ 7 ರಿಂದ ಮಾರ್ಚ್ 17 ರವರೆಗೆ ದೇಶಾ ದ್ಯಂತ ಚಾಲನೆ ನೀಡುತ್ತಿದ್ದು, ಇಂದು ಮಧ್ಯಾಹ್ನ 3 ಕ್ಕೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ತಮ್ಮ ಗೃಹ ಕಚೇರಿ ಬಳಿ ನಿಕ್ಷಯ್ ವಾಹನಕ್ಕೆ ಚಾಲನೆ ನೀಡುವರು.

# ಹೊನ್ನಾಳಿ ತಾ. ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಡಾ. ಎಂ.ಆರ್. ಅಶೋಕ್ ಆಯ್ಕೆ



ಹೊನ್ನಾಳಿ, ಡಿ. 6- ಹಿರೇಕಲ್ಮಠದ ಶ್ರೀ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಮಹಾ ಪೋಷಕರಾಗಿರುವ ಹೊನ್ನಾಳಿ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿಗೆ ಪದಾಧಿಕಾರಿಗಳನ್ನು ಈಚೆಗೆ ಆಯ್ಕೆ ಮಾಡಲಾಗಿದ್ದು, ಅಧ್ಯಕ್ಷರಾಗಿ ಡಾ. ಎಂ.ಆರ್. ಲೋಕೇಶ್ ಆಯ್ಕೆಯಾಗಿದ್ದಾರೆ.

ಗೌರವ ಅಧ್ಯಕ್ಷರಾಗಿ ಕೆ.ಪಿ. ದೇವೇಂದ್ರಯ್ಯ, ಉಪಾಧ್ಯಕ್ಷರುಗಳಾಗಿ ಗೊಲ್ಲರಹಳ್ಳಿ ಮಂಜುನಾಥ್, ಶಾರದಾ ಕಣಗೊಟಗಿ, ಕಾರ್ಯದರ್ಶಿಗಳಾಗಿ ಪ್ರೊ. ಕೆ. ನಾಗೇಶ, ಕತ್ತಿಗೆ ನಾಗರಾಜ್ ಆಯ್ಕೆಯಾಗಿದ್ದಾರೆ.

ಕೋಶಾಧಿಕಾರಿಯಾಗಿ ಅರಕೆರೆ ಕೃಷ್ಣಪ್ಪ, ಗೌರವ ಸಲಹೆಗಾರರಾಗಿ ಯು.ಎನ್. ಸಂಗನಾಳಮಠ, ಪತ್ರಿಕಾ ಪ್ರತಿನಿಧಿಯಾಗಿ ಜಯಪ್ಪ ಅವರುಗಳನ್ನು ಆಯ್ಕೆ ಮಾಡಲಾಗಿದೆ.

**ಸದಸ್ಯರುಗಳು :** ಡಾ. ಉತ್ತಂಗಿ ಕೊಟ್ರೇಶ್, ಪ್ರೊ. ಜಿ.ಪಿ. ರಾಘವೇಂದ್ರ, ಗಾಯಕ ಕಡದಕಟ್ಟೆ ತಿಮ್ಮಪ್ಪ, ನಾಗರಾಜಪ್ಪ ಜೋಗಿಹಳ್ಳಿ, ಡಿ. ಶಿವರುದ್ರಪ್ಪ, ಬಿ.ವಿ. ಬಸವರಾಜಪ್ಪ, ಹರಾಳು ಮಹಾಬಲೇಶ್ವರ, ಎಲ್. ರೋಹಿತ್ ಕುಮಾರ್, ಪ್ರೊ. ಎಂ. ನಾಗರಾಜನಾಯಕ್, ಡಾ. ಟಿ.ಆರ್. ಕುಬೇರಪ್ಪ, ಎನ್.ಹೆಚ್. ಗೋವಿಂದಪ್ಪ, ಸತೀಶ್ ಎ. ಕತ್ತಿಗೆ, ಧನರಾಜಪ್ಪ, ಪ್ರೊ. ಬಿ.ತಿಪ್ಪೇಶ್, ಬಸವರಾಜಪ್ಪ, ದಿನೇಶ್ ಕಾಂಬಳಿ, ಜಗದೀಶ್ ಅವರುಗಳು ಆಯ್ಕೆಯಾಗಿದ್ದಾರೆ.

**ತಾಲ್ಲೂಕು ಕದಳಿ ಮಹಿಳಾ ವೇದಿಕೆ :** ಗೌರವಾಧ್ಯಕ್ಷರಾಗಿ ಶಾರದ ಕೊಣಗೊಟಗಿ, ಅಧ್ಯಕ್ಷರು ಡಾ. ಪ್ರತಿಮಾ ನಿಜಗುಣ ಶಿವಯೋಗಿ, ಉಪಾಧ್ಯಕ್ಷರುಗಳಾಗಿ ವೀಣಾ ಸುರೇಶ್, ಎಂ.ಎಸ್. ರಾಜೇಶ್ವರಿ, ಕಾರ್ಯದರ್ಶಿಯಾಗಿ ಸುಮ ರವಿಕುಮಾರ್, ಕೋಶಾಧಿಕಾರಿಯಾಗಿ ಶಿಲ್ಪ ರಾಜುಗೌಡ್ರು, ಗೌರವ ಸಲಹೆಗಾರರಾಗಿ ಸುನಂದ ಎ.ಜಿ. ಸುನಂದ, ಸವಿತಾ ವೀರೇಶ್ ಆಯ್ಕೆಯಾಗಿದ್ದಾರೆ.

**ಸದಸ್ಯರುಗಳು :** ಆರ್.ಹೆಚ್. ಗೀತಾ, ಹಾಲಮ್ಮ ಬಸವರಾಜ್, ಆಶಾ, ಪಾರ್ವತಿ ವೀರೇಶ್, ಕೆ.ಎಂ. ಅಶ್ವಿನಿ, ಎಂ.ಬಿ. ವನಜಾಕ್ಷಿ, ಲತಾ ಸಿದ್ದಪ್ಪ, ಗಿರಿಜಮ್ಮ ಮಂಜಾಚಾರ್, ಶಿಲ್ಪ ಪಾಲಾಕ್ಷಪ್ಪ, ಕೆ.ಹೆಚ್. ರಶ್ಮಿ, ಚಂದ್ರಕಲಾ, ಸುಧಾ ಶಿವು.

# ಪೋಟೋಗ್ರಾಫಿ ತರಬೇತಿ

ದಾವಣಗೆರೆ, ಡಿ. 6 -ಡ್ರೋನ್ ಆಧಾರಿತ ಪೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಉದ್ಯೋಗ ಪಡೆಯಲು ಇಚ್ಚಿಸುವ ಪರಿಶಿಷ್ಟ ಪಂಗಡದ ಯುವಕ, ಯುವತಿಯರಿಗೆ ತರಬೇತಿ ನೀಡಲು ಅರ್ಜಿ ಅಹ್ವಾನಿಸಲಾಗಿದೆ.

ಆಸಕ್ತರು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ದಾವಣಗೆರೆ, ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ದಾವಣಗೆರೆ, ಜಗಳೂರು, ಚನ್ನಗಿರಿ ತಾಲ್ಲೂಕು ಹಾಗೂ ಸಹಾಯಕ ನಿರ್ದೇಶಕರು, (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಹರಿಹರ ಮತ್ತು ಹೊನ್ನಾಳಿ ಕಚೇರಿಯಲ್ಲಿ ಪಡೆದು, ಇದೇ ದಿನಾಂಕ 11 ರೊಳಗಾಗಿ ಸಲ್ಲಿಸಬೇಕು.

# ಧ್ವನಿಯಾದವರು ಅಂಬೇಡ್ಕರ್

(1ನೇ ಪುಟದಿಂದ) ಗಾಯನ ಪ್ರಸ್ತುತ ಪಡಿಸಿದರು. ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಸಿಇಓ ಸುರೇಶ್.ಬಿ.ಇಟ್ನಾಳ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ನಾಗರಾಜ, ಡಿಡಿಪಿಐ ಕೊಟ್ರೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರವಿಚಂದ್ರ, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಮುಖಂಡರಾದ ರವಿನಾರಾಯಣ, ನಂದಿಗಾವಿ ಶ್ರೀನಿವಾಸ್ ಇತರರು ಉಪಸ್ಥಿತರಿದ್ದರು.

# ನೀಲಗುಂದ ಸಹಕಾರ ಸಂಘದ ಚುನಾವಣೆ ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಸಲ್ಲಿಕೆ



ಹರಪನಹಳ್ಳಿ, ಡಿ. 6 - ತಾಲ್ಲೂಕಿನ ನೀಲಗುಂದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳಿಗೆ ಡಿ.15 ರಂದು ನಡೆಯುವ ಚುನಾವಣೆಗೆ ಅರೇಮಜ್ಜಿಗೇರಿ ಗ್ರಾಮದಿಂದ ಹರಪನಹಳ್ಳಿ ನಾಗಪ್ಪ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಸಾಲಗಾರರ ಕ್ಷೇತ್ರದ ಭಾಗ-1 ರಲ್ಲಿ ಸಾಮಾನ್ಯ ವರ್ಗದಿಂದ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧೆ ಬಯಸಿ ರಿಟರ್ನಿಂಗ್ ಅಧಿಕಾರಿ ಸೋಮಪ್ಪ ಶಿವಪ್ಪ ಲಮಾಣಿ ಅವರಿಗೆ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಿದರು.

ಅಭ್ಯರ್ಥಿ ಹರಪನಹಳ್ಳಿ ನಾಗಪ್ಪ ಅವರಿಗೆ ವ್ಯಾಸನತಾಂಡಾ ಗ್ರಾಮದ ಎಲ್.ಸೋಮಶೇಖರನಾಯ್ಕ್ ಸೂಚಕರಾಗಿ ಸಹಿ ಹಾಕಿದರು.

# ಸಂವಿಧಾನದ ಬಗ್ಗೆ ಹೆಚ್ಚು ಜಾಗೃತಿ ಅಗತ್ಯ



## ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು

ದಾವಣಗೆರೆ, ಡಿ. 6- ಸಂವಿಧಾನ ಶಿಲ್ಪಿ, ಭಾರತ ರತ್ನ ಅಂಬೇಡ್ಕರ್ ರವರ ಆಶಯಗಳಿಗೆ ಮತ್ತು ಸಂವಿಧಾನಕ್ಕೆ ಅಡ್ಡಿಪಡಿಸುವ ಯತ್ನವನ್ನು ಸಂಘ ಪರಿವಾರದ ಜನ ನಿರಂತರವಾಗಿ ಮಾಡುತ್ತಿದ್ದಾರೆ, ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ಅಂಬೇಡ್ಕರ್‌ರವರ ಜನಪರ ಆಶಯಗಳು ಮತ್ತು ಭಾರತದಂತಹ ಪ್ರಜಾಪ್ರಭುತ್ವ ದೊಡ್ಡ ದೇಶಕ್ಕೆ ನೀಡಿದ ಸಮಾನತೆಯ ಸಂವಿಧಾನದ ಬಗ್ಗೆ ಹೆಚ್ಚು ಹೆಚ್ಚಾಗಿ ಜನರ ಮಧ್ಯೆ ಪ್ರಚಾರ ಮಾಡಬೇಕಾಗಿದೆ ಮತ್ತು ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ನಾವುಗಳು ಮಾಡಬೇಕಾಗಿದೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ಹೇಳಿದರು.

ಇಲ್ಲಿನ ಕಾಂ. ಪಂಪಾಪತಿ ಭವನದಲ್ಲಿ ಇಂದು ಏರ್ಪಡಾಗಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ರವರ 68ನೇ ಮಹಾ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಸಿಪಿಐ ಜಿಲ್ಲಾ ಸಹಕಾರ್ಯದರ್ಶಿ ಹೆಚ್. ಜಿ. ಉಮೇಶ್ ಮಾತನಾಡಿ ಅಂಬೇಡ್ಕರ್ ಕುರಿತು, ಅವರ ಆಶಯಗಳ ಕುರಿತು ನಾವುಗಳು ಅವರ ವಿಚಾರಗಳನ್ನು ಹೆಚ್ಚು ಪ್ರಚಾರ ಮಾಡುವುದರ ಮೂಲಕ ಜನ ಜಾಗೃತಿ ಗೊಳಿಸಬೇಕಾಗಿದೆ ಎಂದರು.

ಜಿ.ಯಲ್ಲಪ್ಪ,ಮಹಮ್ಮದ್ ಬಾಷಾ ಜಗಳೂರು, ಟಿ. ಹೆಚ್. ನಾಗರಾಜ್ ಹರಿಹರ, ಮಹಮ್ಮದ್ ರಫೀಕ್ ಚನ್ನಗಿರಿ, ನಿಟ್ಟುವಳ್ಳಿ ಬಸವರಾಜ್, ಸರೋಜ, ಐರಣಿ ಚಂದ್ರು, ಕೆ.ಜಿ. ಶಿವಮೂರ್ತಿ, ಯರಗುಂಟೆ ಸುರೇಶ್, ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹರಿಹರಕ್ಕೆ ನಾಳೆ ಕಾಲ್ನಡಿಗೆ



ದಾವಣಗೆರೆ, ಡಿ.6- ಕುಂದುವಾಡ ಕೆರೆ ವಾಯು ವಿಹಾರ ಬಳಗದ ವತಿಯಿಂದ ಹೊಸ ವರ್ಷದ ಪ್ರಯುಕ್ತ ದಾವಣಗೆರೆಯಿಂದ ಹರಿಹರದ ಹರಿಹರೇಶ್ವರ ದೇವಸ್ಥಾನಕ್ಕೆ ಕಾಲ್ನಡಿಗೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ.

ನಾಡಿದ್ದು ದಿನಾಂಕ 8 ರ ಭಾನುವಾರ ಬೆಳಿಗ್ಗೆ 5.30ಕ್ಕೆ ನಗರದ ಬಿ.ಎಸ್.ಎನ್.ಎಲ್. ಸರ್ಕಲ್‌ನಿಂದ ಪ್ರಾರಂಭವಾಗುತ್ತದೆ. ಕಾಲ್ನಡಿಗೆ ಜಾಥಾಕ್ಕೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಚಾಲನೆ ನೀಡುವರು. ಕಾಲ್ನಡಿಗೆ ಜಾಥಾ ಹರಿಹರೇಶ್ವರ ದೇವಸ್ಥಾನ ತಲುಪಿದ ಬಳಿಕ ಅಲ್ಲಿ ಯೋಗಾ ಮತ್ತು ಧ್ಯಾನ ಶಿಬಿರ ನಡೆಯಲಿದೆ.

ದೇವಸ್ಥಾನ ಆವರಣದಿಂದ ದಾವಣಗೆರೆಗೆ ಬರುವವರಿಗೆ ನಗರದ ಸಪ್ತಗಿರಿ ವಿದ್ಯಾಸಂಸ್ಥೆ 3, ಸೆಂಟ್‌ಜಾನ್ಸ್ ವಿದ್ಯಾಸಂಸ್ಥೆ 2, ಯುರೋಕಿಡ್ಸ್ ವಿದ್ಯಾಸಂಸ್ಥೆ 2 ಹಾಗೂ ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆ ವತಿಯಿಂದ 2 ಬಸ್ಸಿನ ವ್ಯವಸ್ಥೆ ಮಾಡಲಾಗಿದೆ. ಆಸಕ್ತರು ಭಾಗವಹಿಸಿ ನಮ್ಮ ನಡೆ ಆರೋಗ್ಯದ ಕಡೆ ಎಂಬ ಕಾಲ್ನಡಿಗೆಗೆ ಸಹಕರಿಸಬೇಕೆಂದು ಕುಂದುವಾಡ ಕೆರೆ ವಾಯು ವಿಹಾರ ಬಳಗದ ಅಧ್ಯಕ್ಷ ಜೆ. ಈಶ್ವರ್‌ಸಿಂಗ್ ಕವಿತಾಳ್ ಮನವಿ ಮಾಡಿದ್ದಾರೆ.


## ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.

**ನಿಯಮ 8(1) ಪರಿಶಿಷ್ಟ 4**
**ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್**
**(ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ)**

ಸೆಕ್ಯೂರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆ 2002ರ ಅನ್ವಯ ಕೆಳ ಸಹಿದಾರರು ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ. ದಾವಣಗೆರೆ, ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002 ನಿಯಮ-3 ಮತ್ತು 9 ಓದಿಕೊಂಡಂತೆ ಕಲಂ 13(12) ರನ್ವಯ ಪ್ರದತ್ತವಾಗಿರುವ ಅಧಿಕಾರ ಗಳನ್ನು ಚಲಾಯಿಸಿ, ಸಾಲಗಾರರಿಗೆ ಸಾಲವನ್ನು ಮರುಪಾವತಿಸಲು ದಿನಾಂಕ 12.03.2024 ರಂದು ತಗಾದೆ ನೋಟೀಸುಗಳನ್ನು ನೀಡಲಾಗಿತ್ತು. ಸದರಿ ಸೂಚನೆಗಳು ತಲುಪಿದ ದಿನಾಂಕದಿಂದ 60 ದಿವಸದೊಳಗೆ ಸೂಚನೆಯಲ್ಲಿ ಸೂಚಿಸಿರುವ ಮೊಬಲಗನ್ನು ಮರುಪಾವತಿ ಮಾಡಬೇಕಿತ್ತು. ಸಾಲಗಾರರು ಸಾಲದ ಮೊಬಲಗನ್ನು ಮರುಪಾವತಿ ಮಾಡಲಿಲ್ಲವಾದ್ದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ನಿಯಮದ ನಿಯಮ 8 ಮತ್ತು 9 ನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ13(4) ರನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ದಿನಾಂಕ 05.11.2024ರಂದು ಈ ಕೆಳಕಂಡ ಸೊತ್ತುಗಳನ್ನು ಕೆಳ ಸಹಿದಾರರು ಸಾಂಕೇತಿಕವಾಗಿ ವಶಪಡಿಸಿಕೊಂಡಿರುತ್ತೇವೆ. ನಿರ್ದಿಷ್ಟವಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ನಡೆದಿದ್ದೇ ಆದರೆ ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ. ದಾವಣಗೆರೆ ಇದರ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಹಾಗೂ ಇತರೆ ಖರ್ಚುಗಳನ್ನು ಚುಕ್ತಾ ಮಾಡುವುದಕ್ಕೆ ಒಳಪಟ್ಟಿರುತ್ತದೆ.

**ಸಾಲಗಾರರ ಹೆಸರು ಮತ್ತು ವಿಳಾಸ :** **1) ಶ್ರೀ ಬಿ.ಎಸ್. ರವಿಶೇಖರ್ ಬಿನ್ ಬಿ.ಜೆ. ಷಣ್ಮುಖಪ್ಪ,** ಡೋರ್ ನಂ.2218, 5ನೇ ಮೇನ್, 5ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ದಾವಣಗೆರೆ **2) ಸಾಲದ ಖಾತೆ :** ಹೌಸಿಂಗ್ ಸಾಲ (ಹೆಚ್ ಎಲ್)ನಂ.175 ಬರಬೇಕಾದ ಸಾಲದ ಬಾಕಿ ಅಸಲು ರೂ.12,77,026=00 ಬಡ್ಡಿ ರೂ.60,170=00 (31.10.2024ರವರೆಗೆ)+ ಈ ತಹಲ್‌ವರೆಗೆ ಬಡ್ಡಿ + ಇತರೆ ಖರ್ಚುಗಳು ಇದ್ದಲ್ಲಿ

**ಜಾಮೀನುದಾರರುಗಳ ಹೆಸರು :** **1. ಶ್ರೀಮತಿ ಡಿ.ಕೆ. ರಶ್ಮಿ** ಡೋರ್ ನಂ.1701/3,2ನೇ ಮೇನ್ 17ನೇ ಕ್ರಾಸ್, ಎಂ.ಡಿ. ಲೇ ಔಟ್ ಕೆ.ಟಿ.ಜೆ. ನಗರ, ದಾವಣಗೆರೆ. **2. ಶ್ರೀ ಪರಶುರಾಮಪ್ಪ,** ಡೋರ್ ನಂ.937/1, ರಂಭಾಪುರಿ ರೋಡ್,'ಸಿ' ಬ್ಲಾಕ್, ಶೇಖರಪ್ಪನಗರ, ದಾವಣಗೆರೆ.


**ಬ್ಯಾಂಕಿಗೆ ಅಡಮಾನ ಮಾಡಿರುವ ಆಸ್ತಿಯ ವಿವರ :** ದಾವಣಗೆರೆ ನಗರದ ಸಬ್ ರಿಜಿಸ್ಟ್ರಾರ್‌ರವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆಯ ಸೈಟ್‌ನ 2ನೇ ವಾರ್ಡು, 2ನೇ ಡಿವಿಜನ್, ಹಳೆ ಡೋರ್ ನಂ. 1021/1 ರಿಂದ 6, ಹಳೆಪೇಟೆ, ದಾವಣಗೆರೆಯಲ್ಲಿ ಬರತಕ್ಕ ಪೂರಾ ಸೊತ್ತಿನ ಅಳತೆ 28+22/2 x 175 ಅಡಿವುಳ್ಳ ಈಗಿನ ಡೋರ್ ನಂ.1021/4ಸೊತ್ತು, ಆರ್ ಸಿಸಿ ಮನೆಯ ಗ್ರೌಂಡ್ ಮತ್ತು 1ನೇ ಫ್ಲೋರ್.

**ಇದರ ಚೆಕ್ಕುಬಂದಿ ಈ ಕೆಳಗಿನಂತಿದೆ :** ಪೂರ್ವಕ್ಕೆ ; 3' ಕಾಮನ್ ಪ್ಯಾಸೇಜ್, ಪಶ್ಚಿಮಕ್ಕೆ : ಶ್ರೀ ಬಿ.ಜಿ. ವಿನಯ್ ಮತ್ತು ಬಿ.ಜಿ. ನಾಗರಾಜ್ ಸೊತ್ತು, ಉತ್ತರಕ್ಕೆ : ಶ್ರೀ ಬಿ.ಎಸ್. ಚಂದ್ರಶೇಖರ ಸೊತ್ತು, ದಕ್ಷಿಣಕ್ಕೆ : ಶ್ರೀ ಬಿ. ಕರಿಬಸಪ್ಪನವರ ಸೊತ್ತು.

ದಿನಾಂಕ : 05.11.2024
ಸ್ಥಳ : ದಾವಣಗೆರೆ

ಸಹಿ/- **(ಎನ್. ತುಳಸಿನಾಥ),**
ಅಧಿಕೃತ ಅಧಿಕಾರಿ ಹಾಗೂ ಪ್ರಧಾನ ವ್ಯವಸ್ಥಾಪಕರು
ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.

## 31 ರಿಂದ ನಗರದಲ್ಲಿ ಪ್ರವಚನ



ದಾವಣಗೆರೆ, ಡಿ. 6- ಶ್ರೀ ಶಿವಯೋಗೀಶ್ವರ ಭಜನಾ ಸಂಘದ ವತಿಯಿಂದ ಇದೇ ದಿನಾಂಕ 31 ರಿಂದ ಒಂದು ತಿಂಗಳ ಪರ್ಯಂತ ಪುರಾಣ ಪ್ರವಚನವು ಪ್ರತಿದಿನ ಸಂಜೆ 6.30 ರಿಂದ ರಾತ್ರಿ 8 ರವರೆಗೆ ನಗರದ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ.

ಲಿಂ. ಪಂ. ಡಾ. ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರೂ, ಹೆಸರಾಂತ ಪ್ರವಚನಕಾರರೂ ಆದ ಅಬ್ಬಿಗೆರೆ ಮಂಜುನಾಥ ಶಾಸ್ತ್ರಿ ಅವರು ಕಲ್ಬುರ್ಗಿ ಶರಣ ಬಸವೇಶ್ವರರ ಪುರಾಣ ನಡೆಸಿಕೊಡಲಿದ್ದಾರೆ.

ಇದೇ ಸಂದರ್ಭದಲ್ಲಿ ಶ್ರೀ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿಗಳಾದ ಶ್ರೀ ಕಲ್ಲಯ್ಯಜ್ಜನವರಿಗೆ ತುಲಾಭಾರ ಸೇವೆಗಳು ಜರುಗಲಿವೆ ಎಂದು ಭಜನಾ ಸಂಘದ ಸಂಚಾಲಕರೂ, ಪುರಾಣ ಪ್ರವಚನದ ಸಂಚಾಲಕರೂ ಆಗಿರುವ ಅಜ್ಜಂಪುರ ಶೆಟ್ರು ಮೃತ್ಯುಂಜಯ ತಿಳಿಸಿದ್ದಾರೆ.

ಲಿಂ. ಪಂ. ಪುಟ್ಟರಾಜ ಕವಿ ಗವಾಯಿಗಳವರು 48 ವರ್ಷಗಳ ಹಿಂದೆ ಆರಂಭಿಸಿ ನಡೆಸಿಕೊಂಡು ಬರುತ್ತಿರುವ ಈ ಪುರಾಣ ಪ್ರವಚನವು 49ನೇ ವರ್ಷವಾಗಿರುವ ಈ ಬಾರಿಯೂ ಎಂದಿನಂತೆ ನಡೆಯಲಿದೆ. ಸದ್ಭಕ್ತರು ಪ್ರವಚನದಲ್ಲಿ ಭಾಗವಹಿಸುವುದರ ಮೂಲಕ ಯಶಸ್ವಿಗೊಳಿಸುವಂತೆ ಬಸವರಾಜಪ್ಪ ಮತ್ತು ವೈ. ರುದ್ರೇಶ್ ಕೋರಿದ್ದಾರೆ.

## ನಗರದಲ್ಲಿಂದು ಶ್ರೀ ಸುಬ್ರಹ್ಮಣ್ಯ ಸ್ವಾಮಿ ಚಂಪಾಷಷ್ಠಿ



ನಗರದ ರವೀಂದ್ರನಾಥ್ ಬಡಾವಣೆ, ಸುಬ್ರಮಣ್ಯ ನಗರದಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಚಂಪಾಷಷ್ಠಿ ಅಂಗವಾಗಿ ಇಂದು ಬೆಳಿಗ್ಗೆ 6 ಗಂಟೆಯಿಂದ ಶ್ರೀ ಸ್ವಾಮಿಗೆ ವಿಶೇಷ ಅಭಿಷೇಕ, ಅರ್ಚನೆ ಹಾಗೂ ಪೂಜಾ ಕಾರ್ಯಕ್ರಮವಿರುತ್ತದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ಕದರಮಂಡಲಗಿ ಕಾಂತೇಶ ಸ್ವಾಮಿ ಕಾರ್ತಿಕೋತ್ಸವ, ತೆಪ್ಪೋತ್ಸವ ಇಂದು



ಬ್ಯಾಡಗಿ ತಾಲ್ಲೂಕಿನ ಸುಕ್ಷೇತ್ರ ಕದರಮಂಡಲಗಿ ಶ್ರೀ ಆಂಜನೇಯ ಸ್ವಾಮಿಯ ಮಹಾಕಾರ್ತಿಕೋತ್ಸವ ಇಂದು ರಾತ್ರಿ 8.30ಕ್ಕೆ ನಡೆಯಲಿದೆ. ನಾಳೆ ಭಾನುವಾರ ರಾತ್ರಿ 10.30ಕ್ಕೆ ತೆಪ್ಪೋತ್ಸವ ನಡೆಯಲಿದೆ.

## ನಗರದಲ್ಲಿ ಇಂದು ವಿದ್ಯಾಧೀಶ ಆಚಾರ್ಯ ಗುತ್ತಲ ಮಹಾಭಾರತ ಪ್ರವಚನ, ದೀಪೋತ್ಸವ



ವಿಶ್ವ ಮಧ್ವ ಮಹಾಪರಿಷತ್ತಿನ ದಾವಣಗೆರೆ ಕೇಂದ್ರದ ರಜತ ಮಹೋತ್ಸವ ಅಂಗವಾಗಿ ಪಂಡಿತ ವಿದ್ಯಾ ಧೀಶ ಆಚಾರ್ಯ ಗುತ್ತಲ ಅವರಿಂದ ಮಹಾಭಾರತ ಪ್ರವಚನ ಕಾರ್ಯಕ್ರಮ ಇಂದಿನಿಂದ ಮೂರು ದಿನ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಡೆಯಲಿದೆ. ಇಂದು ಸಂಜೆ 6 ರಿಂದ 7.30 ರ ವರೆಗೆ ಪ್ರವಚನ ನಡೆಯಲಿದೆ. ರಾತ್ರಿ 7.30 ಕ್ಕೆ ದೀಪೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ನಾಳೆ ಭಾನುವಾರ ಬೆಳಗ್ಗೆ 9 ರಿಂದ ಮನ್ಯುಸೂಕ್ತ ಮತ್ತು ವೇದವ್ಯಾಸ ಮಂತ್ರದ ಹೋಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 11 ರಿಂದ 12.30 ರ ವರೆಗೆ ಪ್ರವಚನದ ಮಂಗಳ ಇರುತ್ತದೆ.

## ಎಲೆಬೇತೂರಿನಲ್ಲಿ ನಾಡಿದ್ದು ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿ ಕಾರ್ತಿಕೋತ್ಸವ

ದಾವಣಗೆರೆ,ಡಿ.6- ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಇದೇ ದಿನಾಂಕ 9 ರ ಸೋಮವಾರ ಕಾರ್ತೀಕೋತ್ಸವ ನಡೆಯಲಿದೆ. ಬೆಳಿಗ್ಗೆ ಶ್ರೀ ಸವಗದ್ದಿಗೆ ಸಂಗಮೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಂಗಳಾರತಿ ನಡೆಯಲಿದೆ.

## ಯಲವಟ್ಟಿಯಲ್ಲಿ ಇಂದು ಕಾರ್ತಿಕೋತ್ಸವ



ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಹಾಗೂ ಈಶ್ವರ ದೇವಸ್ಥಾನಗಳಲ್ಲಿ ಇಂದು ಸಂಜೆ 7ಕ್ಕೆ ಕಾರ್ತಿಕೋತ್ಸವ ನಡೆಯಲಿದೆ ಎಂದು ಗ್ರಾಮದ ರಾಜಪ್ಪ, ಜಯಣ್ಣ ತಿಳಿಸಿದ್ದಾರೆ.

## ಬಸವನಕೋಟೆ ಗ್ರಾಮದ ಸುಲೋಚನಮ್ಮ ನಿಧನ



ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು
ಬಸವನಕೋಟೆ ಗ್ರಾಮದ ವಾಸಿ
ಲಿಂ. ಶ್ರೀ ಗೌಡ್ರ ಸಿದ್ದಪ್ಪನವರ ಧರ್ಮಪತ್ನಿ
**ಶ್ರೀಮತಿ ಸುಲೋಚನಮ್ಮ**
ಇವರು ದಿನಾಂಕ 6.12.2024ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ನಿಧನರಾಗಿದ್ದಾರೆ.ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.12.2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ಜಗಳೂರು ತಾಲ್ಲೂಕು ಬಸವನಕೋಟೆ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : ಜಿ.ಎಸ್. ಜಗದೀಶ್ ಸಹೋದರರು, ಮೊ. : 63611 12889


ವರ್ಷಾಂತ್ಯದ ಕ್ಲಿಯರೆನ್ಸ್

HYUNDAI
HYUNDAI
Biggest Ever Savings
End-of-year Bargains:
Drive Your Dream Car for Less!

ಅತ್ಯುತ್ತಮ ಬೆಲೆಗಳು, ಅತ್ಯುತ್ತಮ ಕಾರುಗಳು,

Grand i10 NIOS
Benefits upto
90,000*

VENUE(Petrol)
Benefits upto
90,000*



| | | | | | | | |
|---|---|---|---|---|---|---|---|
| EXTER | Savings upto 70,000* | i20 | Savings upto 95,000* | AURA | Savings upto 70,000* | VERNA | Savings upto 1,25,000* |
| ALCAZAR (Pre-facelift) | Savings upto 2,00,000* | VENUE NLINE | Savings upto 95,000* | TUCSON | Savings upto 1,70,000* | | |

* Terms & Conditions apply

KJ HYUNDAI
http://kj.hyundaimotor.in
info@kjhyundai.in

Head Office: # 371/271, P.B.Road, Avaragere, Davanagere. Ph: 7022042241, 7022001205
Branch: NH-13, Holalkere Road, Channagiri. Ph: 6366508866, 7022898487.
Branch: Near BVKS Layout, Bheemasamudra Main Road, Chitradurga. Ph: 9980759983, 7022001208.
Branch: Plot No. 112, P.B.Road, Mruthyunjaya Nagar, Ranebennuru. Ph: 7406555311, 9606738752


॥ ಶ್ರೀ ಕೊಟ್ಟೂರೇಶ್ವರ ಪ್ರಸನ್ನ ॥

## ಹತ್ತನೇ ವರ್ಷದ ಪುಣ್ಯಸ್ಮರಣೆ



**ಜಿ. ಶಿವಪ್ರಕಾಶ್‌ರವರು**

ನಿವೃತ್ತ ಅಸಿಸ್ಟೆಂಟ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ದಾವಣಗೆರೆ.

ಕರುಣಾಮಯಿ, ಸ್ನೇಹ ಜೀವಿ, ಸಹೃದಯಿ ಹಾಗೂ ನಮ್ಮೆಲ್ಲರ ಹಿತ ಚಿಂತಕರಾಗಿದ್ದ ನೀವುಗಳು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು ಕಳೆದವು. ದೈಹಿಕವಾಗಿ ನೀವು ನಮ್ಮ ಬಳಿ ಇಲ್ಲದಿದ್ದರೂ, ನಮ್ಮೆಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿರುತ್ತೀರಿ. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

✦ ಪತ್ನಿ : ಶ್ರೀಮತಿ ಎಂ.ಸುಜಾತ ಶಿವಪ್ರಕಾಶ್
✦ ಮಕ್ಕಳು : ಎಸ್. ಪ್ರವೀಣ್‌ಕುಮಾರ್, Assistant sub-inspector of police
✦ ಎಸ್. ಸುನೀಲ್‌ಕುಮಾರ್, (Advocate)
ಎಸ್. ವಿನಯ್ ಕುಮಾರ್, Marketing Superintendent, KMF
ಸೊಸೆಯಂದಿರು :
ಜಿ.ಎಸ್. ನಳಿನ ಸುನೀಲ್‌ಕುಮಾರ್, Senior Assistant, BESCOM
ಕವಿತ, ವೇದ ✦ ಮಗಳು : ಪೂಜಾ ಮಲ್ಲೇಶ್
✦ ಅಳಿಯ : ಮಲ್ಲೇಶ್. ಹೆಚ್. ಬಾಗಳಿ, Police Department
✦ ಮೊಮ್ಮಕ್ಕಳು : ಶ್ರೇಯಸ್, ಸಾನ್ವಿ, ಶುಭಾ
✦ ಪುಟಾಣಿಗಳಾದ : ನಂದಿನಿ, ನಂದಿತ (ಟ್ವಿಂಟು) ಬೇಬಿ ಆಫ್ ನಳಿನ

ದಾವಣಗೆರೆ ಜಿಲ್ಲಾ ಪೊಲೀಸ್ ಸಿಬ್ಬಂದಿ ಅಭಿಮಾನಿ ಬಳಗದವರು, ಅಂಗಡಿ ಮನೆತನದವರು ಹಾಗೂ ಬಂಧು-ಮಿತ್ರರು, ದಾವಣಗೆರೆ.

## ಬಿ. ಗೋಣೆಪ್ಪ ನಿಧನ



ದಾವಣಗೆರೆ ಸಿಟಿ, ನಿಟ್ಟುವಳ್ಳಿ, ಕಾಲೇಜು ರಸ್ತೆ ವಾಸಿ
ಬಿ.ಜಿ. ಕೊಟ್ರೇಶ್
(ಬಿಜೆಪಿ ಮುಖಂಡರು ಹಾಗೂ ದಾ-ಹ ನಗಾರಭಿವೃದ್ಧಿ ಪ್ರಾಧಿಕಾರಾದ ಮಾಜಿ ಸದಸ್ಯರು)ಇವರ ತಂದೆ

**ಬಿ. ಗೋಣೆಪ್ಪ**

ನಿವೃತ್ತ ಅಧಿಕ್ಷಕರು, ಕೃಷಿ ಇಲಾಖೆ, ದಾವಣಗೆರೆ

ಇವರು, ದಿನಾಂಕ 06.12.2024ರ ಶುಕ್ರವಾರ ಸಂಜೆ 5.30ಕ್ಕೆ ನಿಧನರಾದರು. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.12.2024ರ ಶನಿವಾರ ಮಧ್ಯಾಹ್ನ 12.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

: ದುಃಖತಪ್ತ ಕುಟುಂಬವರ್ಗ :

ಧರ್ಮಪತ್ನಿ : ಶ್ರೀಮತಿ ಪಾರ್ವತಮ್ಮ
ಮಕ್ಕಳು : ಶ್ರೀಮತಿ ನಿರ್ಮಲ ಬಿ.ಜಿ. ಕೊಟ್ರೇಶ
ಶ್ರೀಮತಿ ರೇಣುಕಾ ನಾಗಭೂಷಣ್ ಬಿ.ಜಿ.
ಶ್ರೀಮತಿ ಕುಸುಮ ಅಡಿವೆಪ್ಪನವರ್ ವೀರಪ್ಪ
ಅಧೀಕ್ಷಕ ಇಂಜಿನಿಯರ್, ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ, ಮೈಸೂರು
ಮೊಮ್ಮಕ್ಕಳು ಶ್ರೀಮತಿ ಸಂಜಿತಾ ಶಶಿಧರ್, ಶಿವಮೊಗ್ಗ ಮತ್ತು ಅಚ್ಯುತ್ ಎ.ವಿ., ಗಗನ ಬಿ.ಕೆ., ಸಾಯಿಚರಣ್ ಬಿ.ಕೆ., ಕುಮಾರಿ ಆರಾಧ್ಯ ಮತ್ತು ಕುಟುಂಬ ವರ್ಗದವರು

## ಹುಟ್ಟು ಹಬ್ಬದ ಶುಭಾಶಯಗಳು



ದಿನಾಂಕ 7.12.2024ರಂದು
ತಮ್ಮ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ
ಗಂಗಾಮತ ಸಮಾಜದ ಮುಖಂಡರೂ, ಉದ್ಯಮಿಗಳೂ,
ಚಿಕ್ಕನಹಳ್ಳಿ ಶ್ರೀ ಆಂಜನೇಯ ದೇವಸ್ಥಾನ ಟ್ರಸ್ಟ್‌ನ ಕಾರ್ಯಾಧ್ಯಕ್ಷರೂ,
ನಿಟ್ಟುವಳ್ಳಿ ಶ್ರೀ ಗಂಗಾಪರಮೇಶ್ವರಿ ದೇವಸ್ಥಾನ ಟ್ರಸ್ಟ್‌ನ ಖಜಾಂಚಿಗಳೂ,
ಕನ್ನಡ ರಾಜ್ಯೋತ್ಸವ ಸಮಿತಿ ಜಯನಗರ ಗೆಳೆಯರ ಬಳಗದ ಅಧ್ಯಕ್ಷರೂ
ಮತ್ತು 32ನೇ ವಾರ್ಡ್ ಅಧ್ಯಕ್ಷರೂ ಹಾಗೂ
ಕಾಂಗ್ರೆಸ್ ಮುಖಂಡರಾದ

**ಶ್ರೀ ಕಣಸಾಳ್ ಭೀಮೇಶ್**

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.



ಶುಭ ಕೋರುವವರು :
32ನೇ ವಾರ್ಡಿನ
ಸಮಸ್ತ ನಾಗರಿಕರು
ಚಿಕ್ಕನಹಳ್ಳಿ ಬಡಾವಣೆ, ನಿಟುವಳ್ಳಿ

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas